ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಜನವರಿ -೨೦೧೭ ಸಂಚಿಕೆ - ೬

ಅಪಮೌಲ್ಯೀಕರಣ ಮತ್ತು ನಾವು

*

ಎಡ-ಬಲಗಳ ನಡುವೆ ಒಂದಿಷ್ಟು ನೈತಿಕತೆ

*

ಬೆಳಗಾವಿ ಮರಾಠಿಗರಿಗೆ ಆತ್ಮೀಯ ಪತ್ರ

ಜನಪದ ವಿಚಾರದಲ್ಲಿ

ಜನವರಿ – ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನವರಿ - ೨೦೧೬
ಸಂಪುಟ - ೧೭
ಸಂಚಿಕೆ - ೬

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಸೊನ್ನೆ

ಸೊನ್ನೆ, ನಿನಗೆ ಬೆಲೆಯೆ ಇಲ್ಲ
ಎಂದು ಬರಿದೆ ಬೈವರೆಲ್ಲ!
ನಿನ್ನ ಹಿಂದೆ 'ಒಂದು' ನಿಲಲು
ನಿನಗೆ ಬೆಲೆಯು ಬರುವುದು.
'ಒಂದು' ಬೆಂಬಲವಿರೆ ಸೊನ್ನೆ
ಕೋಟಿಗಳನು ತರುವುದು!

ಸೃಷ್ಟಿ ಶಿವನ ಶೂನ್ಯ ಲೀಲೆ,
ಮಾಯೆ, ಬರಿಯ ಸೊನ್ನೆ ಮಾಲೆ:
ಎಂದು ನುಡಿವವರಿತವರೆಲ್ಲ!
ಆದರೇನು ಸತ್ಯವೇ?
ಹಿಂದೆ 'ಒಂದು' ನಿಲಲು ಬಂದು
ಸೊನ್ನೆಮಾಲೆ ಮಿಥ್ಯವೇ?

ಸೃಷ್ಟಿಯೇನೊ ಸೊನ್ನೆ ಮಾಲೆ?
ಶಿವನು 'ಒಂದು' ಬೆನ್ನುಮೂಳೆ!
ಹಿಂದೆ 'ಒಂದು' ನಿಲಲು ಬಂದು
ಸೊನ್ನೆ ಸಿರಿಗೆ ನೆಲೆಮನೆ!
ಹಿಂದೆ ಶಿವನ ಪಡೆದ ಭುವನ-
ಮಾಯೆ ನನ್ನಿಗೆಲೆವನೆ!

-ಕುವೆಂಪು

ಚಿಂತನೆಗೊಂದು ಸಂಗತಿ

ಗೊಡ್ಡು ಎಮ್ಮೆ

ರಾಜಕಾರಣ ಕೆಟ್ಟಿದೆ ಮತ್ತು ರಾಜಕಾರಣಿಗಳು ಭ್ರಷ್ಟರಾಗಿದ್ದಾರೆ ಎಂದು ಎಲ್ಲ ಸಜ್ಜನರು ಮತ್ತು ವಿಚಾರವಂತರು ಸಾಮಾನ್ಯವಾಗಿ ದೂರುತ್ತಾರೆ, ಗೊಣಗುತ್ತಾರೆ. ಆದರೆ ಅವರ್‍ಯಾರೂ ರಾಜಕೀಯ ಕ್ಷೇತ್ರಕ್ಕೆ ಬರುವುದಿಲ್ಲ. ಆರಾಮ್ ಕುರ್ಚಿಯ ಮೇಲೆ ಕುಳಿತು ಮಾತನಾಡುತ್ತಾರೆ. ಆದ್ದರಿಂದ ಅವರೆಲ್ಲರೂ ಕರು ಹಾಕದ ಗೊಡ್ಡು ಎಮ್ಮೆಯಂತಿದ್ದಾರೆ, ಎಂಬ ರೂಪಕವೊಂದನ್ನು ಇತ್ತೀಚಿಗೆ ಶಾಸಕರೊಬ್ಬರು ಬಹಿರಂಗ ಸಭೆಯಲ್ಲಿ ಹೇಳಿದರು. ಅವರ ಈ ಮಾತನ್ನು ಕೇಳಿದಾಗ ಅನಿಸಿದ್ದು ಹೀಗೆ; "ಸಮಾಜದಲ್ಲಿ ಈಗಲೂ ಇರುವ ಅನೇಕ ಒಳ್ಳೆಯ ಸಂಗತಿಗಳನ್ನು ಕೆಡಿಸುತ್ತಿರುವವರು ರಾಜಕಾರಣಿಗಳು ಮತ್ತು ಅವರ ರಾಜಕೀಯ ಪಕ್ಷಗಳು ಆಡಳಿತದಲ್ಲಿರುವ ಭ್ರಷ್ಟಚಾರವನ್ನು ಕಡಿಮೆ ಮಾಡುವುದಕ್ಕಾಗಿ ಇರುವ ಲೋಕಪಾಲ್ ಮತ್ತು ಲೋಕಾಯುಕ್ತ ಎಂಬಂಥ ಸಂಸ್ಥೆಗಳನ್ನು ದುರ್ಬಲ ಮಾಡುವವರು ಅವರೇ, ತನಿಖಾ ಸಂಸ್ಥೆಗಳ ಹಲ್ಲನ್ನು ಕಿತ್ತು ಹಾಕುವವರು ಅವರೇ ಹಾಗೂ ನ್ಯಾಯಾಧೀಶರನ್ನು ಕೊಂಡುಕೊಳ್ಳುವವರು ಅವರೇ. ಭ್ರಷ್ಟಾಚಾರದ ಹುಟ್ಟಿಗೆ ಅವರು ಕಾರಣವಾದಂತೆಯೇ ಅದರ ಸಾವಿಗೂ ಅವರೇ ಕಾರಣರಾಗಬೇಕು. ಬೆಂಕಿ ಹಚ್ಚುವ ಕೆಲಸವನ್ನು ತಾವು ಮಾಡಿ ಅದನ್ನು ನಂದಿಸಲು ಸಜ್ಜನರು ಮತ್ತು ವಿಚಾರವಂತೆರು ಬರಬೇಕೆಂದು ಹೇಳುವುದು ಎಷ್ಟೊಂದು ಸರಿ. ಅವರನ್ನು ಅಗ್ನಿಶಾಮಕದಳದವರನ್ನಾಗಿ ಭಾವಿಸಿದ್ದು ಎಷ್ಟು ಸರಿ? ಈಗ ಮೂಲಭೂತವಾಗಿ ಆಗಬೇಕಿರುವುದು ರಾಜಕಾರಣಿಗಳ ಸ್ವಂತ ಜೀವನದ ಶುದ್ಧತೆ. ಗಾಂಧೀಜಿಯವರು ತಮ್ಮ ರಾಜನೈತಿಕ ಕಾರ್ಯ ಆಧ್ಯಾತ್ಮಿಕ ತಯಾರಿಂದಲೇ ಹೊರಹೊಮ್ಮಿತು ಎಂದು ಹೇಳಿದ್ದಾರೆ. ರಾಜಕೀಯ ಕ್ಷೇತ್ರಕ್ಕೆ ಬರುವವರು ಮೊದಲು ತಮ್ಮ ಜೀವನವನ್ನು ಶುದ್ಧೀಕರಿಸಿಕೊಂಡು ಬಂದರೆ ಇಡೀ ಸಮಾಜವೇ ಶುದ್ಧವಾಗುವುದು. ಯಾವ ರೀತಿ ರಾಜನೋ ಆ ರೀತಿ ಪ್ರಜೆಗಳು ಎಂಬ ನಾಣ್ಣುಡಿಯೇ ಇದೆ. ●

ಅಪಮೌಲ್ಯೀಕರಣ ಮತ್ತು ನಾವು

– ಸುರೇಂದ್ರ ಕೌಲಗಿ

ಮನೆ, ಗ್ರಾಮ, ಅಥವಾ ದೇಶದಲ್ಲಿ ಯಾವುದಾದರೂ ದುರ್ಘಟನೆ ಅಥವಾ ಆಘಾತಕಾರಿ ಬದಲಾವಣೆ ಉಂಟಾದರೆ ಅಲ್ಲಿ ವಾಸಿಸುವ ಮನುಷ್ಯರಾದ ನಾವೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕಾರಣರಾಗುತ್ತೇವಲ್ಲವ? ಕಳೆದ ನವೆಂಬರ್ ಎಂಟರ ರಾತ್ರಿ ದೇಶದ ಪ್ರಧಾನ ಮಂತ್ರಿಯವರು ಸಾವಿರ ಮತ್ತು ಐದು ನೂರು ರೂಪಾಯಿಗಳ ನೋಟನ್ನು ಅಪವಮೌಲ್ಯೀಕರಿಸಿದರು. ನಾಣ್ಯದ ಅಪವಮೌಲ್ಯೀಕರಣವನ್ನು ಮಾಡಬೇಕಾದಂಥ ಪರಿಸ್ಥಿತಿಯನ್ನು ಸೃಷ್ಟಿಸಿದವರು ಯಾರು? ಸರಕಾರವೆ ಅಥವಾ ಜನರೆ? ಅಪಮೌಲ್ಯೀಕರಣದ ಈ ಕಾಲವು ಕೇವಲ ನಾಣ್ಯಕ್ಕೆ ಸಂಬಂಧಿಸಿದ ಅಪಮೌಲ್ಯೀಕರಣವಾಗಿರದೆ ನಮ್ಮೆಲ್ಲರ ಜೀವನದ ಎಲ್ಲ ಕ್ಷೇತ್ರಗಳಲ್ಲಿ ನಾವೇ ಸೃಷ್ಟಿಸಿಕೊಂಡ ಸಾಮಾಜಿಕ ಮೌಲ್ಯಗಳ ಅಪಮೌಲ್ಯೀಕರಣಗೊಳಿಸಿದ ಕಾಲವೂ ಆಗಿದೆ!

ಯಾವುದೇ ವಿಷಮ ಪರಿಸ್ಥಿತಿಯುಂಟಾಗಲು ಒಬ್ಬ ವ್ಯಕ್ತಿ ಇಲ್ಲವೆ ಹಲವಾರು ವ್ಯಕ್ತಿಗಳು ಕಾರಣರಾಗುತ್ತಾರೆ. ನಾಣ್ಯದ ಅಪಮೌಲ್ಯೀಕರಣದಂಥ ಪರಿಸ್ಥಿತಿಗೆ ನಾವೂ ಕಾರಣರಾಗಿರಬಹುದಲ್ಲವೆ? ಈ ಕುರಿತು ಆತ್ಮಾವಲೋಕನ ಮಾಡುವುದು ಅಗತ್ಯ.

ಅಪಮೌಲ್ಯೀಕರಣದ ತರುವಾಯ ಉಂಟಾಗಬಹುದಾದ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ವಿಫಲವಾಗಿದೆ.. ಈ ವಿಷಯದಲ್ಲಿ ಸರ್ಕಾರದ ಅದಕ್ಷತೆ ಮತ್ತು ಅದೂರ ದೃಷ್ಟಿಯ ಕೊರತೆ ಸ್ಪಷ್ಟವಾಗಿ ಎಲ್ಲರ ಅನುಭವಕ್ಕೆ ಬರುತ್ತಿದೆ. ಅದಕ್ಕಾಗಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಅಧಿಕಾರ ವಿರೋಧ ಪಕ್ಷಗಳಿಗಿದೆ.

ಅಪಮೌಲ್ಯೀಕರಣದಿಂದಾಗಿ ಎಲ್ಲರಿಗೂ ತೊಂದರೆಯಾಗಿದೆ. ಯಾರೊಬ್ಬರನ್ನು ಗುರಿಯಾಗಿಟ್ಟುಕೊಂಡು ಅಪಮೌಲ್ಯೀಕರಣ ನಡೆದಿರಲಿಕ್ಕಿಲ್ಲ. ಅಪಮೌಲ್ಯೀಕರಣ ಸರ್ಕಾರದ ನೀತಿಯಾಗಿ ಹೊರಹೊಮ್ಮಿ ಅದು ಸಾರ್ವತ್ರಿಕರಣಗೊಂಡಿದೆ.

ದೇಶದ ಅರ್ಥಶಾಸ್ತ್ರಜ್ಞರಲ್ಲಿ ಈ ಬಗ್ಗೆ ಒಮ್ಮತದ ಅಭಿಪ್ರಾಯ ಹೊರಬಂದಿಲ್ಲ. ಸರ್ಕಾರದಲ್ಲಿರುವ ಅರ್ಥಶಾಸ್ತ್ರಜ್ಞರು ಸಹಜವಾಗಿಯೇ ಸರ್ಕಾರದ ಅಪಮೌಲ್ಯೀಕರಣದ ನೀತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಇನ್ನುಳಿದ ಕೆಲವರು ಸರ್ಕಾರದ ನೀತಿಯನ್ನು ಟೀಕಿಸಿದ್ದಾರೆ. ಅರ್ಥಶಾಸ್ತ್ರಜ್ಞರಿಂದ ಆಗಿರುವ ಸಮರ್ಥನೆ ಅಥವಾ ಟೀಕೆ ಎಲ್ಲವೂ ಶ್ರೀ ಸಾಮಾನ್ಯನ ಹೆಸರಿನಲ್ಲಿ! ಶ್ರೀಸಾಮಾನ್ಯ ಮಾತ್ರ ಅರ್ಥಶಾಸ್ತ್ರದ ವಿಜ್ಞಾನವನ್ನು ಅರಿಯದೆ ಯಾವುದನ್ನೂ ಹೇಳಲಿಕ್ಕಾಗದೆ ಮೌನವಾಗಿದ್ದಾನೆ. ತನ್ನ ಪಾಲಿಗೆಬಂದ

ಕಷ್ಟಗಳನ್ನು ಅನುಭವಿಸುತ್ತಿದ್ದಾನೆ. ವಿರೋಧ ಪಕ್ಷಗಳು ಅಪಮೌಲ್ಯೀಕರಣದ ಕ್ರಮವನ್ನು ವಿರೋಧಿಸುತ್ತಿವೆ. ಬರಲಿರುವ ಚುನಾವಣೆಯಲ್ಲಿ ಹೇಗೆ ಅದನ್ನು ತಮಗೆ ಅನುಕೂಲಕರವಾಗಿ ಪರಿವರ್ತಿಸಿಕೊಳ್ಳುವುದೆಂಬುದರ ಬಗ್ಗೆ ಲೆಕ್ಕಚಾರ ಹಾಕುತ್ತಿವೆ. ಹೀಗೆ ತಜ್ಞರ ಭಿನ್ನಾಭಿಪ್ರಾಯಗಳು ಮತ್ತು ರಾಜಕೀಯ ಪಕ್ಷಗಳ ಸ್ವಾರ್ಥದ ಮೇಲಾಟಗಳು ದೇಶದ ಪ್ರಜೆಗಳನ್ನು ಅನಾಥಗೊಳಿಸಿವೆ.

ಅಪಮೌಲ್ಯೀಕರಣದ ಬಗ್ಗೆ ಬಿರುಸಿನಿಂದ ಚರ್ಚೆ ನಡೆಯುತ್ತಿರುವ ಈ ಸಮಯದಲ್ಲಿ ಜನಸಾಮಾನ್ಯರ ಪರ ಅಥವಾ ವಿರೋಧದ ಅಭಿಪ್ರಾಯವನ್ನು ಖಚಿತವಾಗಿ ಹೇಳಬಹುದಾದಂಥ ಜನತಾ ಸಂಘಟನೆಯು ಅವರಿಗಿಲ್ಲವಾಗಿದೆ. "ಬಡವ, ನೀನು ಇಟ್ಟಂಗೆ ಇರು" ಎಂಬ ಗಾದೆಯಂತೆ ಶ್ರೀ ಸಾಮಾನ್ಯನು ಮೌನವಾಗಿ ಬ್ಯಾಂಕುಗಳ ಮುಂದೆ ಎ.ಟಿ.ಎಮ್ ಗಳ ಮುಂದೆ ಸರತಿ ಸಾಲಿನಲ್ಲಿ ನಿಂತಿದ್ದಾನೆ.

ನಾಣ್ಯದ ಅಪಮೌಲ್ಯೀಕರಣಕ್ಕೆ ಸರ್ಕಾರದ ಆಡಳಿತ ವೈಖರಿ ನಿಮಿತ್ತವಾಗಿರಬಹುದಾದರೂ ಪ್ರಜೆಗಳಾದ ನಾವೂ ಸಹ ಕಾರಣರಾಗಿಲ್ಲವೇ ಎಂದು ಕೇಳಿಕೊಳ್ಳಬೇಕಾಗಿದೆ. ಹಿಂದಿನ ಕಾಲದಲ್ಲಿ ರಾಜನಂತೆ ಪ್ರಜೆಗಳು ಎಂಬ ಮಾತಿತ್ತು. ಆದರೆ ಈಗ ಪ್ರಜಾಪ್ರಭುತ್ವವಿರುವುದರಿಂದ "ಪ್ರಜೆಗಳಂತೆ ರಾಜ" ಎಂಬ ಮಾತು ಅನ್ವಯಿಸುತ್ತಿದೆ. ಈ ಮಾತಿನ ಪ್ರಕಾರ ಪ್ರಭುತ್ವವು ದೇಶದ ಹಿತಕ್ಕಾಗಿ ತನಗೆ ಉಚಿತವೆಂದೆನಿಸಿದ ಯಾವುದಾದರೊಂದು ನೀತಿ ಜಾರಿಗೊಳಿಸಿದರೆ ಅದರಲ್ಲಿ ಪ್ರಜೆಗಳ ಅನಿಸಿಕೆ, ವಿಚಾರ, ವರ್ತನೆ ಮತ್ತು ವ್ಯವಹಾರ ಇತ್ಯಾದಿಗಳು ಕೂಡ ಸಮ್ಮಿಲಿತವಾಗಿರುತ್ತವೆ. ಸಮಾಜದಲ್ಲಿ ಕಳ್ಳತನ, ಕೊಲೆ, ಸುಲಿಗೆ, ಭ್ರಷ್ಟಚಾರ, ಅತ್ಯಾಚಾರ, ಗಲಭೆ ಮುಂತಾದವುಗಳು ಹೆಚ್ಚಾದಾಗ ಅವುಗಳ ನಿಯಂತ್ರಣಕ್ಕಾಗಿ ಮತ್ತು ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಪ್ರಭುತ್ವ ಕೆಲ ಶಾಸನಗಳನ್ನು ಮಾಡಬೇಕಾಗುತ್ತದೆ. ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ರೀತಿಯ ಪ್ರಕ್ರಿಯೆ ಯಾವುದೇ ರಾಜ್ಯಾಡಳಿತದ ಪ್ರಾಥಮಿಕ ಕರ್ತವ್ಯಗಳೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ದೇಶದ ಸಮಾಜದ ಹಿತಕ್ಕಾಗಿ ಯಾವುದೇ ಚುನಾಯಿತ ಪಕ್ಷದ ಸರ್ಕಾರ ಕ್ರಮಕೈಗೊಂಡಾಗ ಎಲ್ಲರೂ ಪ್ರಭುತ್ವದ ಜೊತೆ ಕೈ ಜೋಡಿಸಬೇಕಾಗುತ್ತದೆ. ಆ ರೀತಿ ಮಾಡದೆ ಇದ್ದಲ್ಲಿ ಸಮಾಜದಲ್ಲಿಯ ಕೆಟ್ಟ ಶಕ್ತಿಗಳಿಗೆ ಸಹಕಾರ ಮತ್ತು ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಸತ್ಯ, ಪ್ರಾಮಾಣಿಕತೆ, ನೈತಿಕತೆ, ಬದ್ಧತೆ, ಅಹಿಂಸೆ ಮುಂತಾದ ತಳಸ್ಪರ್ಶಿ ಮೌಲ್ಯಗಳು ಮಾಯಾವಾಗಿವೆ. ಅಸಂಗ್ರಹ ಮತ್ತು ಅಪರಿಗ್ರಹ, ಅಸ್ತೇಯ ಮುಂತಾದ ಜೀವಧಾರಕ ಮೌಲ್ಯಗಳ ಬದಲಾಗಿ ಕ್ಷಣಿಕ ಸುಖದ ಮತ್ತು ವೈರತ್ವ ಬೆಳೆಸುವ ಧನಸಂಗ್ರಹ ಮನೋವೃತ್ತಿ ಸಮಾಜದಲ್ಲಿ ಬಲವಾಗಿದೆ. ಶಿಕ್ಷಣ, ಕೈಗಾರಿಕೆ, ವ್ಯವಸಾಯ, ಆರೋಗ್ಯ, ಕ್ರೀಡೆ, ಸಾಹಿತ್ಯ, ಮುಂತಾದವುಗಳೆಲ್ಲವುಗಳ ಗುರಿ ಹಣಸಂಪಾದನೆಯೇ ಆಗಿದೆ. ಆದ್ದರಿಂದ ಮನುಷ್ಯರೆಲ್ಲೆಲ್ಲ ಕಳ್ಳತನದ ಮನೋವೃತ್ತಿ ಬೆಳೆದಿದೆ. ಹಣಕ್ಕೆ ಇನ್ನೊಂದು

ಹೆಸರು ದ್ರವ್ಯ. ದ್ರವವಾಗಿ ಇರುವ ಪದಾರ್ಥ ಯಾವಾಗಲೂ ಶುದ್ಧವಾಗಿರುತ್ತದೆ. ಅದು ಹರಿಯದೇ ಇದ್ದಲ್ಲಿ ಕೊಳೆತಿರುತ್ತದೆ. ಕಳ್ಳತನದಿಂದ ಸಂಗ್ರಹಿತವಾದ ಅಪಾರ ಹಣ ಹರಿದು ಹೋಗದೇ ಇದ್ದುದರಿಂದ ದೇಶದಲ್ಲಿ ಕೋಟಿ ಕೋಟಿ ಕಪ್ಪುಹಣ ಸಂಗ್ರಹವಾಗಿ ಭ್ರಷ್ಟಾಚಾರ ಸಮಾಜ ಜೀವನದ ಅವಿಭಾಜ್ಯ ಅಂಗವಾಯಿತು. ಕಪ್ಪುಹಣದ ಕಾರಣದಿಂದಾಗಿ ಹಣದುಬ್ಬರ ಹೆಚ್ಚಾಯಿತು. ಅದರಿಂದಾಗಿ ಪದಾರ್ಥಗಳ ಬೆಲೆ ಗಗನಕ್ಕೆ ಏರಿದೆ. ಅದರ ಲಾಭವನ್ನು ಶತ್ರು ದೇಶಗಳು, ಭಯೋತ್ಪಾದಕರು, ಪ್ರಯೋಜನ ಪಡೆಯಲು ಪ್ರಾರಂಭಿಸಿದರು. ದೇಶದಲ್ಲಿ ಸಾಮಾಜಿಕ ಅಶಾಂತಿ ಹೆಚ್ಚಾಗುವಂತಾಯಿತು. ಇದೆಲ್ಲದರ ಪರಿಣಾಮವೇ ನಾಣ್ಯದ ಅಪಮೌಲ್ಯೀಕರಣ. ಅಪಮೌಲ್ಯೀಕರಣದ ಪ್ರಕ್ರಿಯೆಯಿಂದ ಕಪ್ಪುಹಣ ಸಂಗ್ರಹ ಪ್ರವೃತ್ತಿ ನಿಯಂತ್ರಣಕ್ಕೆ ಬರುವುದೇ ಎಂಬ ಸಂದೇಹ ವ್ಯಕ್ತವಾಗುತ್ತಿದೆ. ಇದು ಸರಿ, ಪರಿಹಾರ ನಮ್ಮಲ್ಲಿಯೇ ಇದೆ. ನಮ್ಮ ಸತ್‌ಚಾರಿತ್ಯವೇ ಕಪ್ಪುಹಣ ಸಮಸ್ಯೆಗೆ ಶಾಶ್ವತ ಮದ್ದು.

ನಾಣ್ಯಗಳ ಅಪಮೌಲ್ಯೀಕರಣಕ್ಕೆ ನಾವು ಎಷ್ಟು ಕಾರಣರಾಗಿದ್ದೇವೆ ಮತ್ತು ಅದರ ನಿವಾರಣೆಗೆ ಎಷ್ಟು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ ಎಂಬುದರ ಬಗ್ಗೆ ತೀವ್ರವಾದ ಆತ್ಮಾವಲೋಕನ ಮಾಡಿಕೊಳ್ಳುವುದು ಪ್ರಜೆಗಳಾದ ನಮ್ಮೆಲ್ಲರ ಕರ್ತವ್ಯವಾಗಿದೆ. ಸರ್ಕಾರವು ನಾಣ್ಯದ ಅಪಮೌಲ್ಯೀಕರಣವನ್ನು ಸಾಮಾಜಿಕವಾಗಿ ಯಾವುದೇ ಸಮೂಹಕ್ಕೆ ಅನ್ಯಾಯವಾಗುವಂತೆ ಮತ್ತು ದೇಶದ ಆರ್ಥಿಕ ಸ್ಥಿತಿ ಬುಡಮೇಲಾಗುವಂತೆ ಮಾಡುವುದಾದರೆ ಜನತೆ ಪ್ರತಿರೋಧವನ್ನು ಮಾಡಲೇಬೇಕು.

ಪ್ರಸ್ತುತ ಕೈಗಾರಿಕೀಕರಣ ಮತ್ತು ಜಾಗತೀಕರಣದಲ್ಲಿ ನಮ್ಮ ಜೀವನದ ಮೌಲ್ಯಗಳನ್ನು ಹಣದ ರೂಪದಲ್ಲಿಯೇ ಅಳೆಯಲಾಗುತ್ತಿದೆ.' ನಾವು ಹಣಕಾಸಿನ ಮನುಷ್ಯರಾಗಿದ್ದೇವೆಯೇ ಹೊರೆತು ಪ್ರಕೃತಿಸಹಜ ಮನುಷ್ಯರಾಗಿ ಉಳಿದಿಲ್ಲ. ಅಕ್ರಮ ವ್ಯವಹಾರ ಮಾಡಿ ಸಕ್ರಮಗೊಳಿಸಿಕೊಳ್ಳುವ ವ್ಯವಸ್ಥೆ ರೂಪಿಸಿಕೊಂಡಿದ್ದೇವೆ! ಶಾಶ್ವತವಲ್ಲದ ಅರ್ಥಶಾಸ್ತ್ರವನ್ನು ಒಪ್ಪಿಕೊಂಡಿದ್ದೇವೆ. ಮನುಷ್ಯನಿಗೆ ಎಷ್ಟು ಭೂಮಿ ಬೇಕು ಎಂಬ ಟಾಲ್‌ಸ್ಟಾಯ್‌ರ ಪ್ರಶ್ನೆಗೆ ಉತ್ತರ ಹುಡುಕಬೇಕಿರುವಂತೆಯೇ ಮನುಷ್ಯನಿಗೆ ಎಷ್ಟು ಹಣಬೇಕು ಎಂಬ ಪ್ರಶ್ನೆಗೂ ಉತ್ತರ ಹುಡುಕಬೇಕಿದೆ. ಅದಕ್ಕೆ ಜೆ.ಸಿ. ಕುಮಾರಪ್ಪ ಪ್ರತಿಪಾದಿಸಿರುವ ಶಾಶ್ವತ ಅರ್ಥಶಾಸ್ತ್ರ ಸಿದ್ಧಾಂತವು ಉತ್ತರವಾಗಬಲ್ಲದು.

ಎಡ-ಬಲಗಳ ನಡುವೆ ಒಂದಿಷ್ಟು ನೈತಿಕತೆ ಕುರಿತ ಮಾತುಗಳು...

-ಡಿ.ಎಸ್. ನಾಗಭೂಷಣ

(ಗೆಳೆಯರೇ, ಇದು ನಿಮ್ಮ ಸಹನೆಯನ್ನು ಬೇಡುವ ಸ್ವಲ್ಪ 'ಕ್ಲಿಷ್ಟ' ಲೇಖನ. ದಯವಿಟ್ಟು ಸ್ವಲ್ಪ ವ್ಯವಧಾನದಲ್ಲಿ ಪರಾಂಬರಿಸಿರಿ ಎಂದು ಕೋರುವೆ-ಲೇ.)

ಇಂದು ಬೆಳಬೆಳಿಗ್ಗೆಯೇ ನಮ್ಮ ಮನೆಯ ಕೆಲಸದಾಕೆ ನನ್ನ ಹೆಂಡತಿಯೊಂದಿಗೆ ಗುಸಗುಸ ನಡೆಸುತ್ತಾ, ಅಕ್ಕಾ, ನನ್ನ ಹತ್ರ ಸಾವಿರ ರೂಪಾಯಿಗಳ ಆರು ಹಳೆ ನೋಟುಗಳಿವೆ. ಚಿಲ್ಲರೆ ಮಾಡಿಸಿಕೊಡಕ್ಕಾಗುತ್ತಾ?' ಅಂತ ಕೇಳುತ್ತಿರುವುದು ಕಿವಿಗೆ ಬಿತ್ತು. ಸಹಜವಾಗಿಯೇ ನನ್ನ ಕಿವಿಗಳು ಚುರುಕಾದವು. ನನ್ನ ಹೆಂಡತಿ ನನಗೆ ಕೇಳಿಸುವಂತೆಯೇ, 'ಹದಿನೈದು ದಿವಸದ ಹಿಂದೆ ಎರಡು ನೋಟನ್ನು ನಾನೇ ಬ್ಯಾಂಕಿಗೆ ಕೊಟ್ಟು ಚಿಲ್ಲರೆ ಕೊಡಿಸಿದ್ದೆನಲ್ಲ! ಈಗ ಮತ್ತೆ ಈ ಹಳೇ ನೋಟುಗಳು ಎಲ್ಲಿಂದ ಬಂದವು?' ಎಂದು ಕೇಳಿದಳು. ಅದಕ್ಕೆ ಅವಳು ಮತ್ತೆ ಗುಸುಗುಸುಗುಡುತ್ತಾ, 'ಚೀಟಿ ಎತ್ಕಂಡೆ. ಅವರು ಕೊಟ್ರು' ಎಂದಳು. ಇದನ್ನು ಕೇಳಿ, 'ಯಾರತ್ರ ಹೇಳ್ತಿ ಈ ಸುಳ್ಳುಪಳ್ಳು? ಚೀಟಿ ಹಣ ಹಳೇ ನೋಟಲ್ಲಿ ಯಾರು ಕೊಡ್ತಾರೆ? ನೀನು ಮಳ್ಳಿ ತರಾ ನನ್ನತ್ರ ಮಾತಾಡಬೇಡ.' ಎಂದು ಅವಳನ್ನು ಕೆದಕಿದಳು. ಕೆಲಸದವಳು, ನಾನೂ ಅವಳ ಸಹಾಯಕ್ಕೆ ಬರಲೆಂಬ ಇಂಗಿತದೊಂದಿಗೆ ಏನೋ, ನನ್ನತ್ತಲೂ ಒಮ್ಮೆ ಕಣ್ಣು ಹಾಯಿಸಿ ಮತ್ತೆ ಸುಳ್ಳು ಸುಳ್ಳೇ ಮೆತ್ತಗೆ 'ಅಕ್ಕಾ ನಮ್ಮ ಸಂಘದವರು ಕೊಟ್ಟರು' ಎಂದಳು. ಮತ್ತೆ ನನ್ನ ಹೆಂಡತಿಯ ಪ್ರಶ್ನೆ : 'ಯಾವ ಸಂಘದವರೆ? ಯಾಕೆ ಕೊಟ್ರು?' ಈಗ ಕೆಲಸದವಳಿಗೆ ಸ್ವಲ್ಪ ಪೀಕಲಾಟಕ್ಕಿಟ್ಟುಕೊಂಡಂತಿತ್ತು. ಅವಳು ಕಸ ಗುಡಿಸುವ ನೆಪದಲ್ಲಿ ಹಿತ್ತಲ ಕಡೆ ನಡೆದಳು. ನನ್ನ ಹೆಂಡತಿಯೂ ಅವಳಿಗೆ ಕೆಲಸಗಳ ಸೂಚನೆಗಳನ್ನು ನೀಡುತ್ತಾ ಹಿಂಬಾಲಿಸಿದಳು.

ಹಿತ್ತಲಲ್ಲಿ ಮಾತು ಮುಂದುವರೆದಿರುವುದು ಅಸ್ಪಷ್ಟವಾಗಿ ನನಗೆ ಕೇಳಿಸುತ್ತಿತ್ತು. ಆ ಮಾತುಕತೆಯ ಕೊನೆಗೆ ನನ್ನ ಹೆಂಡತಿ ಸ್ವಲ್ಪ ಆಕ್ರೋಶದಿಂದಲೇ, 'ನೀವೆಂಥ ಜನರೇ! ಮೊನ್ನೆ ಮೊನ್ನೆ ಮೋದಿ ಸರ್ಕಾರವನ್ನು ಬಡವರ ಸರ್ಕಾರ ಬಂದಂಗಾಯ್ತು ಅಂತ ಹೊಗಳ್ತಿದ್ರಿ. ಈಗ ನೋಡಿದರೆ ಕಳ್ಳ ಹಣ ತಗೊಂಡು ಬಂದು ಚಿಲ್ರೆ ಕೊಡಿಸಿ ಅಂತ ಕೇಳ್ತಿದ್ದೀರಿ!' ಎಂದೆನ್ನುತ್ತಾ, 'ನನ್ನ ಕೇಳಬೇಡ.

ಇಂಥದಕ್ಕೆಲ್ಲ ಇನ್ನಾರತ್ರಾದರೂ ಹೋಗು' ಎಂದು ಮಾತು ಮುಗಿಸಿದಂತೆ ತೋರಿತು.

ಸ್ವಲ್ಪ ಅಪ್ರತಿಭಳಾದಂತಿದ್ದ ಕೆಲಸದವಳು, ಕಸ ಗುಡಿಸುವ ಶಬ್ದ ಮಾಡುತ್ತಲೇ 'ಹೋಗ್ಲಿ ಬಿಡಿ ಅಕ್ಕ. ಬಡವ್ರಿಗೆ ಒಂಚೂರು ಸಹಾಯ ಮಾಡ್ತಿರೇನೋಂತ ಕೇಳ್ದೆ ಅಷ್ಟೆ' ಎಂದು ಮಾತು ಮುಗಿಸಲು ಯತ್ನಿಸಿದವಳಂತೆ ಹೇಳಿದ್ದು ಕೇಳಿಸಿತು. ಮಾತು ಏನಾಗಿರಬಹುದೆಂದು ಊಹಿಸಿದ ನಾನು ಅವಳು ಹೋಗುವವರೆಗೆ ನನ್ನ ಹೆಂಡತಿಯನ್ನು ಏನೆಂದು ಕೇಳಲಿಲ್ಲ.

ಒಂದೆರಡು ದಿನಗಳಿಂದಲೇ ಶಿವಮೊಗ್ಗದಲ್ಲಿ ರಾಜಕಾರಣಿಯೊಬ್ಬರು ತಮ್ಮಲ್ಲಿದ್ದ ಲಕ್ಷಾಂತರ ರೂಪಾಯಿಗಳ ಮೊತ್ತದ ಅಕ್ರಮಗೊಂಡ ನೋಟುಗಳನ್ನು ತಮ್ಮ ಬಂಟರುಗಳನ್ನು ಮೇಲಿಂದ ಮೇಲೆ ಬ್ಯಾಂಕುಗಳಿಗೆ ಕಳಿಸಿ ಸಕ್ರಮ ಮಾಡಿಕೊಂಡಾದನಂತರವೂ ಉಳಿದ ಅಪಾರ ಹಣವನ್ನು ಊರಿನ ವಿವಿಧ ಜಾತಿ ಮತ್ತು ಸೇವಾ ಸಂಘಗಳಿಗೆ ಉಚಿತ ರಾಜಕೀಯ ಸಂದೇಶದೊಂದಿಗೆ ಹಂಚುತ್ತಿದ್ದಾರೆ ಎಂಬ ಸುದ್ದಿ ಕೇಳಿದ್ದೆ. ಆ ಕಾರ್ಯಕ್ರಮದ ಭಾಗವಾಗಿ ನಮ್ಮ ಮನೆ ಕೆಲಸದಾಕೆಗೂ ಅವಳ ಸಂಘದಿಂದ ಒಂದಿಷ್ಟು ನೋಟುಗಳು ಕೈಸೇರಿದ್ದವೆಂದು ಊಹಿಸಿದ್ದೆ. ಅದಕ್ಕೇ ಆ ಗುಸುಗುಸು ಮಾತು. ನನ್ನ ಹೆಂಡತಿ ನನ್ನ ಊಹೆಯನ್ನು ಖಚಿತಪಡಿಸಿದಳು.

ಇದನ್ನೆಲ್ಲ ನೋಡಿ, ಕೇಳಿ ನನ್ನಲ್ಲಿ ಅಂದು ಉಂಟಾದ ಜಿಜ್ಞಾಸೆ: 'ಬಡವರೆಂದರೆ ಯಾರು? ಎಡಪಂಥೀಯರು, ಪ್ರಗತಿಪರರು ಎಂದು ಘೋಷಿಸಿಕೊಂಡಿರುವ ನಾವು ಯಾವ ಬಡವರ ಬಗ್ಗೆ, ಎಂತಹ ಬಡತನದ ಬಗ್ಗೆ ಸಹಾನುಭೂತಿ ಹೊಂದಿ ನಮ್ಮ ಸಿದ್ಧಾಂತ-ಕಾರ್ಯಕ್ರಮಗಳನ್ನು ಪ್ರತಿಪಾದಿಸುತ್ತಿದ್ದೇವೆ?' ಮನೆ ಕೆಲಸದ ಇದೇ ಹೆಂಗಸು, ನಮ್ಮ ರಿಕ್ಷಾವಾಲಾನಂತೆಯೇ, ಹತ್ತು ದಿನಗಳ ಹಿಂದಷ್ಟೇ, ಮೋದಿಯವರ ನೋಟು ರದ್ದತಿ ಘೋಷಣೆಯಿಂದ ನಿಜವಾಗಿಯೂ ರೋಮಾಂಚಿತಳಾದಂತೆ 'ಅಂತೂ ಬಡವರಪರ ಸರ್ಕಾರ ಬಂದಂಗೈತೆ!' ಎಂದು ಸಂಭ್ರಮಿಸಿದ್ದಳಲ್ಲಾ! ಅವಳೇ ಈಗ ರದ್ದು ಮಾಡಿದ ನೋಟುಗಳ ಖದೀಮ ಒಡೆಯರಿಂದ ನೋಟು ಪಡೆದು ಅವನ್ನು ಸಕ್ರಮಗೊಳಿಸಿಕೊಳ್ಳಲು ಹೊರಟು ತಾನೇ ಹೆಸರಿಸಿದ 'ಬಡವರ ಸರ್ಕಾರ'ದ ಕಾರ್ಯಕ್ರಮಕ್ಕೇ ದ್ರೋಹ ಬಗೆಯ ಹೊರಟಿದ್ದಾಳಲ್ಲಾ, ಅದೂ ಮತ್ತೆ ತನ್ನ ಬಡತನವನ್ನು ವೈಭವೀಕರಿಸಿಕೊಂಡು?

ಇದು ನನ್ನ ಮನೆಕೆಲಸದಾಕೆಯೊಬ್ಬಳ ವರ್ತನೆಯ ವಿರೋಧಾಭಾಸದ ಸುತ್ತ ಸೃಷ್ಟಿಯಾದ ಜಿಜ್ಞಾಸೆಯಲ್ಲ. ನಾವೇ ಹದಿನೈದು ದಿವಸ ಕಣ್ಣಾರೆ

ನೋಡಿದ್ದೇವೆ, ಎಷ್ಟೊಂದು ಜನ 'ಬಡವರು' ಅಥವಾ 'ವಂಚಿತರು' ತಮ್ಮ ದುಡಿಮೆ ಬಿಟ್ಟು ಕಪ್ಪು ಹಣದ ಕಳ್ಳ ಖದೀಮರ ಅಕ್ರಮ ನೋಟುಗಳನ್ನು ಸ್ಪರ್ಧಾತ್ಮಕ ಕಮೀಷನ್ ಮೇಲೆ ಸಕ್ರಮ ಮಾಡಿಸಿಕೊಡಲು ದಿನಕ್ಕೆರಡು-ಮೂರು ಬ್ಯಾಂಕುಗಳ ಮುಂದೆ ಸರತಿ ಸಾಲುಗಳಲ್ಲಿ ನಿಂತಿದ್ದನ್ನು? ಹಾಗೇ, ಈ ಬಡವರಿಗಾಗಿಯೇ ತೆರೆಯಲಾದ 'ಜನಧನ' ಖಾತೆಗಳಿಗೆ ಈ ಹದಿನೈದು ದಿನಗಳಲ್ಲಿ ಸಾಗರೋಪಾದಿಯಲ್ಲಿ ಠೇವಣಿ ಹಣ ಹರಿದು ಬಂದದ್ದು ಯಾರ ಕೈಗಳ ಮೂಲಕ? ಅಷ್ಟೇ ಅಲ್ಲ, ನಮ್ಮ ರಾಜ್ಯದಲ್ಲಿ ಒಂದೇ ಸಮನೆ ಪತ್ತೆಯಾಗುತ್ತಿರುವ ಖೋಟಾ ಪಡಿತರ ಚೀಟಿಗಳ (ಹಲವರ ಬಳಿ ಐದು-ಆರು ಚೀಟಿಗಳಿದ್ದುದನ್ನು ನಾನೇ ಕಂಡಿದ್ದೆ) ಹಾವಳಿಗೆ ಕಾರಣರಾಗಿದ್ದವರು/ಕಾರಣರಾಗಿರುವವರಾದರೂ ಯಾರು? ಇವೆಲ್ಲ ಸಮಾಜ ವಿರೋಧಿ ಚಟುವಟಿಕೆಗಳಲ್ಲವೆ?

ಹಾಗಾದರೆ ನಾವು ಅಮೂರ್ತವಾಗಿ ಬಡವ-ಶ್ರಮಜೀವಿ-ವಂಚಿತ-ಶೋಷಿತ ಎಂದೆಲ್ಲ ಕರೆಯುವ ಜನರ ಮೂರ್ತ ರೂಪಗಳಾದರೂ ಯಾವುವು? ಇದು ಬಡತನದ ಸಮಸ್ಯೆಯ ಸರಳೀಕರಣವೆಂದು ನನ್ನ ಪ್ರಗತಿಪರ-ಎಡಪಂಥೀಯ ಗೆಳೆಯರು ಸೈದ್ಧಾಂತಿಕ ರಾಗ ಎಳೆಯುವರೆಂದು ನನಗೆ ಗೊತ್ತು. ಆದರೆ ಇದು ಸರಳೀಕರಣವಾದರೆ, ನಿಮ್ಮ ಸಂಕೀರ್ಣ ಗ್ರಹಿಕೆಯಲ್ಲಿನ ಬಡವ ಅಥವಾ ಶ್ರಮಜೀವಿ ಯಾರು, ಇಂದಿನ ಬದುಕಿನ ಯಾವ ಮಾದರಿಯಲ್ಲಿ ಅವನ/ಅವಳ ನಿಜ ಅಸ್ತಿತ್ವವನ್ನು ಗುರುತಿಸಬಹುದು ಮತ್ತು ಹಾಗೆ ಗುರುತಿಸಲು ಇರುವ ಪರಿಕರಗಳಾದರೂ ಯಾವುವು ದಯವಿಟ್ಟು ಹೇಳಿ.

ನಿಜ, ಬಡವರಿಗೆ ಆಸೆ ಸಹಜ. ತಮ್ಮ ದಿನನಿತ್ಯದ ಬಡತನವನ್ನು ನಿವಾರಿಸಿಕೊಳ್ಳಲು ಎದುರುಬಂದ ಇಂತಹ ಅವಕಾಶಗಳನ್ನು ಅವರು ಬಳಸಿಕೊಳ್ಳಲು ಮುಂದಾಗುವ ದೌರ್ಬಲ್ಯಕ್ಕೊಳಗಾಗಲು ಅವರ ಬಡತನವೇ ಕಾರಣವೆಂದು ವಾದಿಸಲು ಸಾಧ್ಯವಿದೆ. ಇದರ ಸಹಜ ಮುಂದಿನ ವಾದ ಸರಣಿ ಎಂದರೆ ಇದಕ್ಕೆ ಮತ್ತೆ ಕಾರಣ, ಸರ್ಕಾರವನ್ನು ನಂಬಿ ಕೂತರೆ ತಮ್ಮ ಬಡತನವೇನೂ ಶಾಶ್ವತವಾಗಿ ನೀಗುವುದೆಂಬ ನಂಬಿಕೆಯೇ ಅವರಲ್ಲಿ ಇಂಗಿ ಹೋಗಿದೆ ಎಂಬುದು. ಹಾಗಾದಲ್ಲಿ ಸರ್ಕಾರದ ನೋಟು ರದ್ದತಿಯಂತಹ ಕಾರ್ಯಕ್ರಮವನ್ನಾದರೂ 'ಬಡವರು' ಬಡವರ ಪರವಾದ ಕಾರ್ಯಕ್ರಮವೆಂದು ಸಂಭ್ರಮದಿಂದ ಸ್ವಾಗತಿಸುತ್ತಿರುವುದರ ಮರ್ಮವಾದರೂ ಏನು? 'ಬಡವವ'ರ ವ್ಯಕ್ತಿತ್ವದ ಈ ಒಡಕಿನ ಮೂಲವಾದರೂ ಯಾವುದು?

ಇನ್ನೊಂದು ಉದಾಹರಣೆ ಕೊಡುವೆ. ಅನುಕೂಲಸ್ಥರು ಅಡಿಗೆ ಅನಿಲದ

ಮೇಲಿನ ಸಹಾಯಧನವನ್ನು ಸ್ವಯಂಪ್ರೇರಣೆಯಿಂದ ಬಿಟ್ಟುಕೊಡಬೇಕೆಂದೂ, ಹಾಗೆ ಬಿಟ್ಟುಕೊಟ್ಟರೆ, ಅದನ್ನು ಬಡ ಕುಟುಂಬವೊಂದಕ್ಕೆ ಅಡಿಗೆ ಅನಿಲ ಒದಗಿಸಲು ಬಳಸಿಕೊಳ್ಳಲಾಗುವುದೆಂದೂ ಸರ್ಕಾರ ಕೇಳಿಕೊಂಡಿದ್ದು ನಿಮಗೂ ನೆನಪಿರಬಹುದು. ನಾನು ಮಧ್ಯಮ ವರ್ಗದ ಪಿಂಚಣಿದಾರನಾದರೂ, ನಮಗೆ ಅಡಿಗೆ ಅನಿಲದ ಸಹಾಯಧನದ ಅಗತ್ಯವಿಲ್ಲವೆನಿಸಿದ್ದರಿಂದ ಅದನ್ನು ಬಿಟ್ಟುಕೊಟ್ಟೆ. ಒಂದೇ ವಾರದಲ್ಲಿ, ಇದರ ಪರಿಣಾಮವಾಗಿ ಬಿಹಾರದ ಬಡಕುಟುಂಬವೊಂದಕ್ಕೆ ಅಡಿಗೆ ಅನಿಲದ ಸೌಲಭ್ಯ ಕಲ್ಪಿಸಿರುವ ಸಂದೇಶವೊಂದು–ಆ ಕುಟುಂಬದ ವಿವರಗಳೊಂದಿಗೆ– ನನಗೆ ಬಂತು. ಇದರಿಂದ ಪ್ರಭಾವಿತನಾದ ನಾನು ನನಗಿಂತಲೂ ಆರ್ಥಿಕವಾಗಿ ಸುಭದ್ರವಾಗಿದ್ದ ಗೆಳೆಯರಿಗೆ ತಂತಮ್ಮ ಅಡಿಗೆ ಅನಿಲದ ಸಹಾಯಧನ ಬಿಟ್ಟುಕೊಡಲು ಹೇಳಿದೆ. ಆದರೆ ಯಾರೊಬ್ಬರೂ ಬಿಟ್ಟುಕೊಡಲು ತಯಾರಾಗಲಿಲ್ಲ. ಇವರೆಲ್ಲ ನನ್ನಂತೆಯೇ ಒಂದು ಕಾಲದಲ್ಲಿ ಬಡವರಾಗಿ ಎಲ್ಲ ಸೌಲಭ್ಯ ಪಡೆದು ಈಗ ಮಧ್ಯಮ–ಮೇಲ್ಮಧ್ಯಮ ವರ್ಗಗಳಿಗೆ ಸೇರಿಕೊಂಡಿರುವವರು. ಒಬ್ಬೊಬ್ಬರದೂ ಒಂದೊಂದು ಸಬೂಬು! ಒಬ್ಬರು 'ಸುಮ್ಮನಿರಿ ಸರ್, ಮೊದಲಾಗಿ ನಾವು ಕಟ್ಟುವ ತೆರಿಗೆ ಯಾರ ಬಾಯಿಗಳಿಗೆ ಹೋಗುತ್ತಿದೆ ಎಂಬುದು ಕಣ್ಣಿಗೆ ಕಾಣುವುದಿಲ್ವಾ? ' ಎಂದು ಕೇಳಿದರೆ, ಮತ್ತೊಬ್ಬರು, 'ಮೊದಲು ನಮ್ಮ ಶಾಸಕರು, ಮಂತ್ರಿಗಳು ತಂತಮ್ಮ ಸೌಲಭ್ಯಗಳನ್ನು ಬಿಟ್ಟುಕೊಡಲು ಮುಂದೆ ಬರಲಿ!' ಎಂದು ಸವಾಲೆಸೆದರು! ಮಗದೊಬ್ಬರು ಇನ್ನೂ ಮುಂದೆ ಹೋಗಿ, 'ಅಯ್ಯೋ ಏನ್ನಾರ್, ಮೋದಿ ವಿರುದ್ಧವಾಗಿದ್ದ ನೀವೇ ಹೀಗೆ ಮೋದಿ ಸರ್ಕಾರದ ಬೆಂಬಲಕ್ಕೆ ನಿಂತಿದ್ದೀರಲ್ಲಾ!' ಎಂದು ಉದ್ಗಾರ ತೆಗೆದು ನನ್ನನ್ನು ದಂಗು ಬಡಿಸಿದರು.

ಅಡಿಗೆ ಅನಿಲದ ಸಹಾಯಧನದ ಈ ಕಥೆಯನ್ನು ಇಲ್ಲಿ ಏಕೆ ಹೇಳಿದೆನೆಂದರೆ, ನೋಟು ರದ್ದತಿಯನ್ನು ಹೊಗಳುತ್ತಲೇ ಅದರ ದುರ್ಲಾಭ ಪಡೆಯಲು ನಿರಾಕರಿಸಲಾಗದ ದೌರ್ಬಲ್ಯಕ್ಕೆ ಬಡತನ ಕಾರಣವೆಂಬ ವಾದ ಭಾವನಾತ್ಮಕವಾದದ್ದೇ ಹೊರತು ಅದು ನಿಜವಲ್ಲವೇನೋ ಎಂಬ ನನ್ನ ಶಂಕೆಯನ್ನು ಪುಷ್ಟೀಕರಿಸಲು. ಬಡತನವೇ ನಿಜ ಕಾರಣವಾಗಿದ್ದರೆ, ಅಡಿಗೆ ಅನಿಲದ ಸಹಾಯಧನಕ್ಕೆ ಸಂಬಂಧಪಟ್ಟಂತೆ ಮಾಜಿ ಬಡವರರಾದ ನನ್ನ ಗೆಳೆಯರ ವರ್ತನೆಗೆ ಏನು ಕಾರಣ? ಹಾಗೆ ನೋಡಿದರೆ, ಬಂಡವಾಳಶಾಹಿ ಲಾಭಕೋರರು, ಬಡವರ ಶತ್ರುಗಳು, ಶೋಷಕ ವರೇಣ್ಯರು ಎಂದು ಇಂದು ಕರೆಯಲ್ಪಡುತ್ತಿರುವ ಅಂಬಾನಿ ಕುಟುಂಬ ಕೂಡ ಕೆಲವೇ ವರ್ಷ ಹಿಂದೆ ಬಡವರ ಕುಟುಂಬವೇ ಆಗಿತ್ತಲ್ಲವೆ? ಹಾಗಾದರೆ, ಶೋಷಿತ ಶೋಷಕನಾಗುವುದರ

ನಡುವೆ ನಡೆಯುವುದಾರೂ ಏನು?

ಮೊದಲಾಗಿ ನನ್ನ ಪ್ರಕಾರ ಈ ಪ್ರಶ್ನೆಯೇ ತಪ್ಪಾಗಿದೆ. ಶೋಷಕ ಮತ್ತು ಶೋಷಿತ ಎಂಬ ವಿಂಗಡಣೆಯ ರಾಜಕಾರಣವೇ ಇಂದು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ. ಅದಕ್ಕೆ ಮತ್ತೆ ಕಾರಣ, ಇದರ ಸ್ಪಷ್ಟ ವಿಂಗಡಣೆ ಮಾಡಿದ ಎಡಪಂಥೀಯ ರಾಜಕಾರಣದ ತಾತ್ವಿಕತೆಯೇ ಆಗಿದೆ. ಜಗತ್ತಿನ ಎಲ್ಲ ಏರುಪೇರುಗಳ, ಅಸಮತೋಲನಗಳ ಮೂಲ ಆರ್ಥಿಕತೆಯಲ್ಲಿದೆ ಎಂಬ ಅದರ ಭೌತವಾದಿ ಎಂದು ಕರೆಯಬಹುದಾದ ದೃಷ್ಟಿಕೋನವೇ ದೋಷಪೂರ್ಣ ವಾದದ್ದು. ಏಕೆಂದರೆ ಇದು ಬದುಕನ್ನು ಗ್ರಹಿಸುವ ಬಗೆಯೇ ಅಸಮಗ್ರವಾದದ್ದು. ಇದರಿಂದಾಗಿ ಇದು ಮನುಷ್ಯನ ಅಂತರಂಗದ ಮೂಲಸತ್ವವಾಗಿದ್ದ ನೈತಿಕತೆಯನ್ನೇ ಸಾಪೇಕ್ಷವೆಂದೂ, ಅಂದರೆ ಆರ್ಥಿಕತೆಯ ಉಪ ಉತ್ಪನ್ನವೆಂದೂ ವಿಶ್ಲೇಷಿಸಿತು. ಆದರೆ ಮನುಷ್ಯ ತನ್ನ ಬದುಕನ್ನು ಆರಂಭಿಸಿದ್ದು ಸಾಂಘಿಕವಾಗಿ; ಇಂದು ಆರ್ಥಿಕತೆ ಎಂದು ಕರೆಯಲಾಗುವ ಕಲ್ಪನೆಯೇ, ಅದರ ಪ್ರಜ್ಞೆಯೇ ಇಲ್ಲದ ಹಂತವದು. ಒಟ್ಟಿಗೆ ಬದುಕುವ ವಿವೇಕ, ಕೌಶಲ್ಯ ಮತ್ತು ಅಂತಃಕರಣಗಳಷ್ಟೇ ಕೆಲಸ ಮಾಡುತ್ತಿದ್ದ ಘಟ್ಟವದು. ಅದೇ ಮನುಷ್ಯನ ಅಂತರಂಗದ, ಮನುಷ್ಯ ಪ್ರಜ್ಞೆಯ ಅಡಿಪಾಯ. ಅದೇ ಮುಂದೆ ನೈತಿಕತೆ ಎಂಬ ಹೆಸರಿನಲ್ಲಿ ಒಂದು ಸಾಮಾಜಿಕ ಸಂಹಿತೆಯಾಗಿ ಬೆಳೆಯಿತು.

ಆದರೆ, ಮನುಷ್ಯ ಬದುಕಿನಲ್ಲಿ ಸುಖ-ಸಂಪತ್ತುಗಳ ಕಲ್ಪನೆ ಬೆಳೆಯ ತೊಡಗಿದಂತೆ, ಅದರ ಸುತ್ತ ಆರ್ಥಿಕತೆ ಎಂಬೊಂದು ಹೊಸ ಕಲ್ಪನೆ ಬೆಳೆಯತೊಡಗಿದಂತೆ ನೈತಿಕತೆಯ 'ಪ್ರಯೋಜನ' ಕಡಿಮೆಯಾಗತೊಡಗಿತು. ಮನುಷ್ಯ ಪ್ರಜ್ಞೆಯ ಈ ಹಂತದಲ್ಲೇ ಉದಯವಾದದ್ದು ಭೌತವಾದ. ಅಥವಾ ಈ ಲೋಕ ಸೃಷ್ಟಿಯಾಗಿರುವುದು ಮನುಷ್ಯನ ಶ್ರಮ ಮಾತ್ರದಿಂದ ಎಂಬ ಲೋಕಗ್ರಹಿಕೆಯ ಮಾದರಿ. ನಮ್ಮ ಜನಪ್ರಿಯ ಎಡಪಂಥ ನಿಂತಿರುವುದೇ ಇಂತಹ ಭೌತವಾದಿ ಲೋಕಗ್ರಹಿಕೆಯ ಸಿದ್ಧಾಂತದ ಮೇಲೆ. ಅದು ಕೂಡ ಸಾಂಘಿಕ ಬದುಕಿನ ತತ್ವವನ್ನೇ ಹೇಳುವುದಾದರೂ, ನೈತಿಕತೆಯನ್ನು ಅಪ್ರಸ್ತುತಗೊಳಿಸಿಕೊಂಡ ತನ್ನ ಪರಿಭಾಷೆಯಲ್ಲಿ ಸಮಾಜವನ್ನು ಬಡವ-ಶ್ರೀಮಂತ ಅಥವಾ ಶೋಷಿತ-ಶೋಷಕ ಎಂದು ಒಡೆದು ನೋಡುವ ವಿಧಾನವೇ ದೋಷಪೂರ್ಣವಾಗಿರುವುದರಿಂದ ಅದರ ಸಮತಾವಾದ ಅಥವಾ ಸಮಾಜವಾದದ ಹೆಸರಿನ ಸಂಘಜೀವನದ ಆದರ್ಶ ಕೈಗೂಡದೇ ಹೋಗಿದೆ.

ಈ ದುರಂತದ ಹಿಂದಿರುವ ಇನ್ನೊಂದು ಕಾರಣವನ್ನೂ ಇಲ್ಲಿ ಹೇಳಿಬಿಡಬೇಕು. ಅದು ಭೌತವಾದಿ ಲೋಕಗ್ರಹಿಕೆ ಕಟ್ಟಿಕೊಟ್ಟ ಹೊಸ

ಇತಿಹಾಸಶಾಸ್ತ್ರದ ತತ್ವಗಳು. ಇವು ಇತಿಹಾಸವನ್ನು ಮನುಷ್ಯ ಇತಿಹಾಸದ ಸ್ಮೃತಿಕೋಶವನ್ನು ಕಾಲಕೋಶದ ಅನಂತತೆಯಲ್ಲಿ ಮಾಗುವುದಕ್ಕೆ ಬಿಡುವ ಬದಲು ಅದನ್ನು ಕೆರಳಿಸುವಂತೆ ಮಾಡಿದವು. ಇದನ್ನೇ ಗಾಂಧಿ, ಇತಿಹಾಸವನ್ನು ಸಂಘರ್ಷಗಳ ಇತಿಹಾಸವಾಗಿ ನೋಡದೆ ಸಂಘರ್ಷಗಳ ನಡುವಣ ಶಾಂತಿ–ಸಾಮರಸ್ಯಗಳ ಇತಿಹಾಸವಾಗಿ ಏಕೆ ನೋಡಬಾರದೆಂಬ ಪ್ರಶ್ನೆಯ ರೂಪದಲ್ಲಿ ಕೇಳಿದ್ದು. ಅವರ ಪ್ರಕಾರ ಇತಿಹಾಸದಲ್ಲಿ ಸಂಘರ್ಷಗಳ ಕಾಲಕ್ಕಿಂತ ಸಂಘರ್ಷಗಳ ನಡುವಣ ಶಾಂತಿಯ ಕಾಲಾವಧಿಗಳೇ ಬಹು ಹೆಚ್ಚು. ಹಾಗಾಗಿ ಮಾನವ ಸಮಾಜದ ವರ್ತನೆಯ ಅಧ್ಯಯನ ಇಂತಹ ಕಾಲಾವಧಿಗಳ ಅಧ್ಯಯನವನ್ನು ಹೆಚ್ಚು ಅವಲಂಬಿಸಬೇಕು. ಆದರೆ ಭೌತವಾದಿ ದೃಷ್ಟಿಕೋನ ಇದಕ್ಕೆ ವಿರುದ್ಧವಾದ ಅಧ್ಯಯನಗಳನ್ನವಲಂಬಿಸಿ ಮನುಷ್ಯ ಸಮಾಜವನ್ನು ಶೋಷಣೆ ಎಂಬ ಘರ್ಷಣಾತ್ಮಕ ಗ್ರಹಿಕೆಯ ನೆಲೆಯಲ್ಲೇ ವಿಶ್ಲೇಷಿಸಲಾಯಿತು. ಇಂತಹ ಅಧ್ಯಯನಗಳಿಗೆ ೧೮–೧೯ನೇ ಶತಮಾನದಲ್ಲಿನ ಯೂರೋಪಿನಲ್ಲಿನ ಜ್ಞಾನಯುಗದ (ಜ್ಞಾನಯುಗ ಎಂದರೇ ಮೂಲತಃ ಭೌತಶಾಸ್ತ್ರದ ಮೆರೆದಾಟದ ಯುಗ) ಆತ್ಯಂತಿಕ ಪರಿಣಾಮವೆಂಬಂತೆ ಮೂಡಿದ ಕೈಗಾಕೀಕರಣ ಸೃಷ್ಟಿಸತೊಡಗಿದ್ದ ಸಾಮಾಜಿಕ ಏರುಪೇರುಗಳ ಒತ್ತಡಗಳೂ ಇದ್ದವು ಎಂಬುದನ್ನೂ ನಾವು ಗಮನಿಸಬೇಕು. ಈ ಕೈಗಾರಿಕೀಕರಣದ ಪರಿಣಾಮವೇ ಸಾಮ್ರಾಜ್ಯಶಾಹಿಗೆ ಕಾರಣವಾಗಿ, ಭೌತವಾದಿ ದೃಷ್ಟಿಕೋನವು ಹೊಸ ಮತ್ತು ಕ್ರಾಂತಿಕಾರಿ ಜ್ಞಾನಮೀಮಾಂಸೆಯ ಹೆಸರಿನಲ್ಲಿ ಜಗತ್ತಿನ ಲೋಕ ಗ್ರಹಿಕೆಯ ಪ್ರಧಾನ(ಜಠಟುಟಿಚಿಟಿಣ ಎಂಬರ್ಥದಲ್ಲಿ) ಮಾರ್ಗವಾಗಿ–ಕೆಲವು ಸ್ಥಳೀಯ ವಿರೋಧ, ಸವಾಲುಗಳ ಮಧ್ಯೆಯೂ–ಹಲವು ರಾಜಿಗಳೊಂದಿಗಾದರೂ ಸ್ಥಾಪಿಸಲ್ಪಟ್ಟಿತು.

ಅದೇನೇ ಇರಲಿ, ಮೂಲ ನೈತಿಕತೆಯ ಪ್ರಜ್ಞೆಯೇ ಇಲ್ಲದ ಸಾಮಾಜಿಕತೆಯ ಉತ್ಪನ್ನವಾದ ಮನುಷ್ಯನೊಳಗೆ ಸದಾ ಶೋಷಿತನೂ, ಶೋಷಕನೂ ಒಟ್ಟಿಗೆ ಇರಬಲ್ಲ. ಸಂದರ್ಭಕ್ಕೆ ತಕ್ಕಂತೆ ಈ ರೂಪಗಳು ಕಾಣಿಸತೊಡಗುತ್ತವೆ ಮತ್ತು ಅದಲು ಬದಲಾಗುತ್ತವೆ. ಎಡಪಂಥೀಯ ರಾಜಕಾರಣ ಎದುರಿಸುತ್ತಿರುವ ಆಂತರಿಕ ತೊಂದರೆ ಇದು. ಅದರ ಮೂಲ ಮೊದಲೇ ಹೇಳಿದಂತೆ, ಅದರ ಭೌತವಾದಿ ಲೋಕಗ್ರಹಿಕೆಯ ಮೀಮಾಂಸೆಯಲ್ಲಿದೆ. ಅದು ಮನುಷ್ಯನನ್ನು ಒಂದು ಭೌತವಾದಿ ಅಸ್ತಿತ್ವವಾಗಿ ಮಾತ್ರ ಪರಿಕಲ್ಪಿಸಿಕೊಂಡು, ಅವನ ಭೌತಿಕ ಅಗತ್ಯಗಳನ್ನು ಪೂರೈಸಿಕೊಳ್ಳುವುದಷ್ಟೇ ಅವನ ಬದುಕಿನ ಸಾರ್ಥಕ್ಯವೆಂಬ ಬದುಕಿನ ವ್ಯಾಖ್ಯಾನವನ್ನು ಸೃಷ್ಟಿಸುತ್ತಿದೆ. ಆದರೆ ಭೌತಿಕ ಅಗತ್ಯಗಳಿಗೆ ಕೊನೆ

ಮೊದಲಿದೆಯೇ? ಹಾಗಾಗಿ ಅದು ಮನುಷ್ಯನನ್ನು ನಿರಂತರ ದಾಹಿಯನ್ನಾಗಿಯೇ ಮಾಡುವ ದುರಂತವನ್ನೂ ಸೃಷ್ಟಿಸಿದೆ. ಇಲ್ಲಿಯೇ ಎಡಪಂಥ ಮತ್ತು ಬಲಪಂಥ ಒಟ್ಟು ಸೇರುವುದು. ಬಲಪಂಥ ಮನುಷ್ಯನನನ್ನು ಶೋಷಿತ ಮತ್ತು ಶೋಷಕ ಎಂದು ವಿಂಗಡಿಸದೆ, ಮನುಷ್ಯನ ವೈಯುಕ್ತಿಕ ಸಾಮರ್ಥ್ಯದ ಮಾನ್ಯತೆ ಮತ್ತು ಪ್ರೋತ್ಸಾಹಗಳನ್ನು ನಂಬುತ್ತಾ ಆ ನಂಬಿಕೆಯ ಆಧಾರದ ಮೇಲೇ ಮಾನವ ಕುಲ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳಬಹುದು ಎಂದು ವಾದಿಸುತ್ತಾ ಬಂದು ಕೊನೆಗೆ ಸೇರುವುದು ಇಲ್ಲಿಯೇ. ಹಾಗಾಗಿ ಈ ಎಡ-ಬಲ ಎಂಬ ಪಂಥೀಯ ವಿಂಗಡಣೆಗಳೇ ಆತ್ಯಂತಿಕವಾಗಿ ದೋಷಪೂರ್ಣ ಮತ್ತು ಅಪಾಯಕಾರಿ ಎಂಬ ಮನವರಿಕೆ ಆಗುವ ಕಾಲವೀಗ ಬಂದಿದೆ.

ಹಾಗಾದರೆ ಇದರಿಂದ ಹೊರದಾರಿ ಎಲ್ಲಿದೆ? ಗಾಂಧಿ, ಮನುಷ್ಯ ಮೂಲತಃ ನೈತಿಕ ಜೀವನ ನಡೆಸಲು ಬದ್ಧನಾಗಿದ್ದಾನೆ ಎಂದು ನಂಬಿದ್ದರು. ಈ ನಂಬಿಕೆಯ ಹಿನ್ನೆಲೆಯಲ್ಲಿ ಗಾಂಧಿ ನೈತಿಕತೆ ಎಂದರೇನು ಎಂಬ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ: ನೈತಿಕತೆ ಎಂದರೆ ತನ್ನ ನೆರೆಹೊರೆಯನ್ನು ಕುರಿತ ತನ್ನ ಕರ್ತವ್ಯದ ಪಾಲನೆಯ ಅರಿವು. ಅಂದರೆ, ಸಾಂಘಿಕತೆ ಮನುಷ್ಯ ಜೀವನದ ಮೂಲ ಅಡಿಪಾಯವಾಗಿದ್ದು, ಅದನ್ನು ಕಾಪಾಡಲು ತಾನು ಮಾಡಬೇಕಾದ ಕರ್ತವ್ಯದ ಅರಿವು ಇದು. ಆದರೆ ಎಡಪಂಥದ ಮೀಮಾಂಸೆಯಲ್ಲಿ ಎಲ್ಲ ತಲೆಕೆಳಕಾಗಿದೆ. ಅದು ಸಮಾಜವನ್ನು ಶೋಷಕ-ಶೋಷಿತ ಎಂಬ ದೋಷಪೂರ್ಣ ಗ್ರಹಿಕೆಯಲ್ಲಿ ಒಡೆದು ನೋಡುತ್ತಿರುವುದರಿಂದ ಕರ್ತವ್ಯ ಎಂಬ ಸೇವೆಯ ಪರಿಕಲ್ಪನೆಯೇ ಹಿನ್ನೆಲೆಗೆ ಸರಿದುಹೋಗಿ ಸುಖವೆಂಬ ಹಕ್ಕಿನ ಪರಿಕಲ್ಪನೆಯೊಂದೇ ಮುನ್ನೆಲೆಗೆ ಬಂದಿದೆ. ಪ್ರತಿಯೊಬ್ಬನೂ ಶೋಷಿತ ಅಥವಾ ಶೋಷಕ ಎಂದು ಗೆರೆ ಹೊಡೆದಂತೆ ವಿಂಗಡಿಸಲ್ಪಟ್ಟಿರುವುದರಿಂದ ಈ ಹಕ್ಕು-ಕರ್ತವ್ಯಗಳೂ ಈ ಶೋಷಕ-ಶೋಷಿತರ ನಡುವೆ ಗೆರೆ ಹೊಡೆದಂತೆ ವಿಂಗಡಣೆಯಾಗಿಬಿಟ್ಟಿವೆ. ಹಾಗಾಗಿಯೇ ಬಡವರ ಸಮಾಜ ವಿರೋಧಿ ಕೃತ್ಯಗಳು ತಪ್ಪಾಗಿ ಕಾಣದೆ, ಸಾಂದರ್ಭಿಕ ದೌರ್ಬಲ್ಯಗಳಾಗಿ ಮಾತ್ರ ಕಂಡು, ಎಡಪಂಥೀಯರ ಸುಖೀ ರಾಜ್ಯದ ಗುರಿ ಮುಂದೆ ಮುಂದಕ್ಕೇ ಹೋಗುತ್ತಿರುತ್ತದೆ ಮತ್ತೆ ಇದು ಬಡವರ ತಪ್ಪು ಮಾಡುವ ಸಂದರ್ಭಗಳನ್ನೂ ಹೆಚ್ಚಿಸುತ್ತಾ ಹೋಗಿ ಎಡಪಂಥ ಎನ್ನುವುದು ತನ್ನನ್ನು ತಾನೇ ಒಂದು ವಿಷಚಕ್ರದೊಳಕ್ಕೆ ಬಂಧಿಸಿಕೊಳ್ಳುತ್ತಾ ಹೋಗುತ್ತದೆ. ಎಡಪಂಥದ

ಈ ನನ್ನ ಮಾತುಗಳು ನನ್ನನ್ನು ಬಲಪಂಥದ ಪ್ರತಿಪಾದಕ ಎಂದು ಬಿಂಬಿಸುವುದಿಲ್ಲ ಎಂದು ನಂಬಿದ್ದೇನೆ. ಏಕೆಂದರೆ, ನಮ್ಮ ಗ್ರಹಿಕೆ ಸ್ಪಷ್ಟವಿದ್ದಾಗ

ಪಂಥವೆಂಬುದಕ್ಕೆ ಜಾಗವೇ ಇರುವುದಿಲ್ಲ. ಆದರೆ ಜಗತ್ತಿನ ದುಃಖ ನಿವಾರಣೆ ಎಲ್ಲ ಮನುಷ್ಯರ ಕರ್ತವ್ಯವಾಗಿರುವುದರಿಂದ ಈ ಗುರಿಯೊಂದಿಗೆ ತನ್ನನ್ನು ಗುರುತಿಸಿಕೊಂಡು, ಆದರೆ ದಾರಿ ತಪ್ಪಿದಂತೆ ತೋರುತ್ತಿರುವ ಗುಂಪನ್ನು ಎಡಪಂಥೀಯರು ಎಂದು ಪಾರಿಭಾಷಿಕವಾಗಿ ಕರೆಯುತ್ತಿದ್ದು, ಅದರೊಂದಿಗೆ ನನ್ನ ಸಹಾನುಭೂತಿ ಇರುವುದರಿಂದ ಇಲ್ಲಿ ಒಂದು ಆತ್ಮಾವಲೋಕನದ ಪ್ರಯತ್ನವೊಂದನ್ನು ಮಾಡಿದ್ದೇನಷ್ಟೆ. ನನ್ನ ಪ್ರಕಾರ ಬಲಪಂಥವೆಂಬುದಕ್ಕೆ ನಿಜವಾದ ಅಸ್ತಿತ್ವವೇ ಇಲ್ಲ. ಅದು ನಮಗೆ ಕಾಣಿಸಿಕೊಂಡಿದ್ದರೆ, ಅದಕ್ಕೆ ಕಾರಣ ಲೋಕ ಕಲ್ಯಾಣಕ್ಕೆ ಇರಬಹುದಾದ ಮತ್ತು ಈಗ ಸಾಂದರ್ಭಿಕವಾಗಿ ಎಡವೆಂದು ಕರೆಯಲಾಗುತ್ತಿರುವ ಪಂಥ ಸಂಪೂರ್ಣ ದಾರಿ ತಪ್ಪಿರುವುದೇ ಆಗಿದೆ. ಬೆಳಕು ಮಸುಕಾಗತೊಡಗಿದಾಗ ಕತ್ತಲು ಆವರಿಸಿಕೊಳ್ಳತೊಡಗುವಂತೆ.

ಕೊನೆಯ ಮಾತು: ಈ ಎಡಪಂಥ ಮತ್ತೆ ಸರಿ ದಾರಿಗೆ ಬರುವುದಾದರೂ ಹೇಗೆ? ಅದು ಮನುಷ್ಯ ಜೀವನ–ನಾಗರೀಕತೆಗಳನ್ನು ಯಾವುದೇ ಸೈದ್ಧಾಂತಿಕ ಪೂರ್ವಗ್ರಹಗಳಿಲ್ಲದೆ ಪ್ರಾಚೀನ ವಿವೇಕದ ಕಣ್ಣುಗಳಲ್ಲಿ ನೋಡಿದ ಗಾಂಧಿ ನೈತಿಕತೆಯ ಅರ್ಥವನ್ನು ಮೂರ್ತವಾಗಿ ಹೇಳಲು ಬಳಸಿದ 'ನೆರೆಹೊರೆ' ಎಂಬ ಕಲ್ಪನೆಯನ್ನು ಪುನರನ್ವೇಷಿಸುವ ನಮ್ಮ ಪ್ರಾಮಾಣೀಕ ಪ್ರಯತ್ನದಲ್ಲಿದೆ. ಹಾಗಾಗಿ ಇಂದಿನ ಎಡಪಂಥದ ರಾಜಕಾರಣ ನೆರೆಹೊರೆಯ ರಾಜಕಾರಣವನ್ನು ಕಟ್ಟುವ ಕಡೆ ಗಮನ ಹರಿಸಬೇಕಿದೆ. ಅದು ನಮಗೆ ಎಂತಹ, ಎಷ್ಟು ತಂತ್ರಜ್ಞಾನ ಬೇಕು? ನಮ್ಮ ಅಭಿವೃದ್ಧಿ ಮಾದರಿ ಎಂತಹದ್ದಾಗಿರಬೇಕು? ಸುಖದ ಪರಿಮಿತಿಗಳು ಯಾವುವು? ವ್ಯಕ್ತಿ ಮುಖ್ಯವೋ, ಸಮಾಜ ಮುಖ್ಯವೋ? ಎಂಬ ಮೂಲಭೂತ ಪ್ರಶ್ನೆಗಳನ್ನೆಲ್ಲ ತನ್ನ ರಾಜಕಾರಣದ ದಾರಿಯಲ್ಲೇ ಪರಿಹರಿಸಿಕೊಳ್ಳುತ್ತಾ ಹೋಗುತ್ತದೆ.

ಇಂತಹ ಕಷ್ಟಸಾಧ್ಯ ಪ್ರಯತ್ನ ಆಗುವವರೆಗೆ ಮೋದಿಯಂಥವರು, ಗೋರಕ್ಷಣೆ, ನಿರ್ದಿಷ್ಟ ದಾಳಿ, ನೋಟು ರದ್ದತಿ, ಬೇನಾಮಿ ಆಸ್ತಿ ತಪಾಸಣೆ ಮುಂತಾದ 'ಜನೋನ್ಮಾದ' ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾ ತಮ್ಮ ಹಿಡಿತವನ್ನು ಬಿಗಿ ಮಾಡಿಕೊಳ್ಳುತ್ತಲೇ ಹೋಗುತ್ತಾರೆ. ಇದರ ಪರಿಣಾಮವಾಗಿ ಎಡಪಂಥೀಯರ ಹತಾಶೆಯ ಅರಚಾಟ–ಕೂಗಾಟಗಳೂ ಜಾಸ್ತಿಯಾಗುತ್ತಾ ಹೋಗಿ ಜನರಿಗೆ ಹಿಂಸೆ ತಪ್ಪಿದ್ದಲ್ಲ.

ಬೆಳಗಾವಿ ಮರಾಠಿಗರಿಗೆ ಆತ್ಮೀಯ ಪತ್ರ

– ಸುರೇಂದ್ರ ಕೌಲಗಿ

ನವೆಂಬರ್ ಒಂದು ಕರ್ನಾಟಕ ರಾಜ್ಯವೆಲ್ಲ ರಾಜ್ಯೋತ್ಸವವವನ್ನು ಆಚರಿಸುತ್ತಿರುವ ಸಂಭ್ರಮದಲ್ಲಿದ್ದಾಗ ರಾಜ್ಯದ ಅವಿಭಾಜ್ಯ ಅಂಗವಾದ ಬೆಳಗಾವಿ ನಗರದ ಮರಾಠಿ ಭಾಷಿಕರು ಕರಾಳ ದಿನವನ್ನು ಆಚರಿಸಿದ್ದು ಎಷ್ಟು ಸಮಂಜಸ, ಎಷ್ಟು ಭಾರತೀಯತೆ ಮತ್ತು ಎಷ್ಟು ನಾಗರೀಕತೆ ಮತ್ತು ಎಷ್ಟು ಮರಾಠ ಸಂಸ್ಕೃತಿ ಎಂಬುದನ್ನು ಬೆಳಗಾವಿ ಮರಾಠಿಗರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಪ್ರತಿವರ್ಷದ ಕನ್ನಡರಾಜ್ಯೋತ್ಸವ ಸಮಯದಲ್ಲಿ ಮರಾಠಿಗರು ಕರಾಳ ದಿನವನ್ನು ಆಚರಿಸುತ್ತಲೇ ಬಂದಿದ್ದಾರೆ. ಈ ಪ್ರಕಾರದ ಆಚರಣೆಗೆ ೬೦ ವರ್ಷಗಳೇ ಸಂದಿವೆ. ಕರಾಳ ದಿನದ ಆಚರಣೆಯ ಹಿಂದಿರುವ ಉದ್ದೇಶಗಳು ನೆರವೇರಿಲ್ಲ ಮತ್ತು ಮುಂದೆಯೂ ನೆರವೇರುವ ಸಂಭವ ಅತಿ ಕಡಿಮೆ. ಆದ್ದರಿಂದ ಮರಾಠಿಗರು ಕೇವಲ ಕಹಿಯನ್ನೇ ನೆನೆಯದೆ ಭವಿಷ್ಯದ ಸವಿಯನ್ನು ನೆನೆಯಲು ಪ್ರಯತ್ನಿಸಬೇಕು. ಕನ್ನಡ ಮತ್ತು ಮರಾಠಿ ಭಾಷೆಗಳ ಮಧ್ಯೆ ಸಾಂಸ್ಕೃತಿಕ ಐತಿಹಾಸಿಕ, ಭಾವನಾತ್ಮಕ ಮತ್ತು ಸಾಹಿತ್ಯಿಕ ಸಂಬಂಧವಿದೆ. ಕನ್ನಡದ ಮೇಲೆ ಮರಾಠಿಯ ಪ್ರಭಾವ ಬಿದ್ದಿರುವಂತೆಯೇ ಮರಾಠಿಯ ಮೇಲೆ ಕನ್ನಡ ಭಾಷೆಯ ಪ್ರಭಾವವಿದೆ. ಕರ್ನಾಟಕದಲ್ಲಿ ಮರಾಠ ರಾಜ್ಯ ನಡೆದಂತೆಯೇ ಮಹಾರಾಷ್ಟ್ರದಲ್ಲಿ ಕರ್ನಾಟಕ ರಾಜ್ಯವೂ ನಡೆದಿದೆ. ಪಂಢರಾಪುರದ ವಿಠಲನನ್ನು ಮರಾಠಿಗರಿಗಿಂತ ಹೆಚ್ಚಾಗಿ ಕನ್ನಡಿಗರು ಆರಾಧಿಸುತ್ತಾ ಬಂದಿದ್ದಾರೆ. ಮರಾಠಿಯ ವಿಠಲನನ್ನು ಕುರಿತು ಕನ್ನಡದಲ್ಲಿ ದೊಡ್ಡ ದಾಸ ಸಾಹಿತ್ಯವೇ ನಿರ್ಮಾಣವಾಗಿದೆ. ಪುರಂದರ ವಿಠಲನನ್ನು ಮರಾಠಿಗರು "ಕನ್ನಡದ ವಿಠೋಬಾ"ನೆಂದೇ ಕರೆಯುತ್ತಾರೆ.

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬೆಳಗಾವಿ ನಗರ ಮತ್ತು ಜಿಲ್ಲೆಯಲ್ಲಿ ಮರಾಠಿಗರು ಮತ್ತು ಕನ್ನಡಿಗರು ಕೂಡಿಯೇ ಚಳುವಳಿ ನಡೆಸಿ ದೇಶಕ್ಕೆ ಸ್ವಾತಂತ್ರ್ಯ ತಂದಿದ್ದಾರೆ. ದ.ರಾ. ಬೇಂದ್ರೆಯವರಂಥ ಸಾಹಿತಿಗಳು ಕನ್ನಡ ಮತ್ತು ಮರಾಠಿ ಭಾಷೆಗಳ ಮಧ್ಯೆ ಸೇತುಬಂಧವಾಗಿದ್ದಾರೆ. ಆರ್. ಆರ. ದಿವಾಕರ್, ಡಿ.ಪಿ ಕರ್ಮರ್ಕರ್, ನಾಸು ಹರ್ಡಿಕರ್ ಹೆಚ್.ಡಿ. ದಾತಾರ್ ಮುಂತಾದ ಮಹನಿಯರು ಕೂಡ ಎರಡೂ ಭಾಷೆಗಳ ಮಧ್ಯೆ ಸೇತುಬಂಧವಾಗಿದ್ದಾರೆ. ಆಲೂರು ವೆಂಕಟರಾಯರು ತಿಲಕರ ಮರಾಠಿಯ 'ಗೀತಾ ರಹಸ್ಯ' ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿ ತಿಲಕರನ್ನು ಕನ್ನಡಿಗರಿಗೆ ಆತ್ಮೀಯರನ್ನಾಗಿಸಿದ್ದಾರೆ.

ಮಹಾತ್ಮಗಾಂಧೀಜಿಯವರ ಆಪ್ತ ಶಿಷ್ಯರಾಗಿದ್ದ ಆಚಾರ್ಯ ವಿನೋಬಾಭಾವೆಯರ ತಾಯಿ ಕರ್ನಾಟಕದ ಜಮಖಂಡಿಯವರು. ಆ ತಾಯಿಯ ಮನೆ ಈಗಲೂ ಜಮಖಂಡಿಯಲ್ಲಿ ಶಿಥಿಲಾವಸ್ಥೆಯಲ್ಲಿದೆ. ವಿನೋಬಾಭಾವೆಯರ ಸುಧೀರ್ಘ ಭೂದಾನ ಪಾದಯಾತ್ರೆಯ ಕಾಲದಲ್ಲಿ ಅವರ ಸೇವೆಯನ್ನು ಕೊನೆಯವರೆಗೂ ಮಾಡಿದಂಥವರು ಕನ್ನಡತಿ ಮಹಾದೇವಿಯಕ್ಕ. ಅಲ್ಲದೆ 'ಜೈ ಜಗತ್' ಎಂಬ ಘೋಷಣೆಯನ್ನು ವಿನೋಬಾ ಜಗತ್ತಿಗೆ ನೀಡಿದ್ದು ಕರ್ನಾಟಕದ ತುಮಕೂರು ಜಿಲ್ಲೆಯ ಪ್ರವಾಸದಲ್ಲಿದ್ದಾಗ. ಹೀಗೆ ಕನ್ನಡಿಗರ ಮತ್ತು ಮರಾಠಿಗರ ಮಧ್ಯ ಸಾಂಸ್ಕೃತಿಕವಾದ ವೈಚಾರಿಕವಾದ ಆತ್ಮೀಯವಾದ ಸಂಬಂಧವಿದೆ. ಇಂಥ ಸಂಬಂಧವನ್ನು ಇನ್ನಷ್ಟು ಆತ್ಮಿಯವಾಗಿ ಬಲಗೊಳಿಸುವುದರಲ್ಲಿಯೇ ಇಬ್ಬರ ಹಿತವಿದೆ. ಕರ್ನಾಟಕವಂತೂ ಕುವೆಂಪುರವರು ಹಾಡಿರುವಂತೆ ಸರ್ವಜನಾಂಗದ ಶಾಂತಿಯ ತೋಟ, ಅಲ್ಲದೆ ಅನೇಕ, ಭಾಷಿಕರ ಸಹಬಾಳ್ವೆಯ ಕೂಟ.

ಬೆಳಗಾವಿ ನಗರದಲ್ಲಿ ದಿವ್ಯ, ಭವ್ಯ ಪರಂಪರೆಯುಳ್ಳ ಎರಡು ಸಂಸ್ಕ್ರತಿಗಳ ಮತ್ತು ಎರಡು ಭಾಷೆಗಳ ಸಂಗಮದ ಸ್ಥಳವಾಗಿದೆ. ಭಾಷಾ ಮತ್ತು ಸಾಂಸ್ಕೃತಿಕ ಸಾಂಗತ್ಯವನ್ನು ಉಪಯೋಗಿಸಿಕೊಂಡು ಎರಡೂ ಭಾಷೆಗಳು ಬೆಳೆದಲ್ಲಿ ಭಾರತೀಯತೆ ಇನ್ನೂ ಹೆಚ್ಚು ಪ್ರಕಾಶಿಸುತ್ತದೆ. ಮಹಾರಾಷ್ಟ್ರದ ವೈಶ್ವಿಕ ಹಿತಚಿಂತನೆಯ ಸಂತ ಪರಂಪರೆಗೆ ಮತ್ತು ಲೋಕಾಮಾನ್ಯ ತಿಲಕ್, ಗೋಪಾಲಕೃಷ್ಣ ಗೋಖಲೆ, ರಾನಡೆ, ಡಾ||ಅಂಬೇಡ್ಕರ್ ಮುಂತಾದ ಶ್ರೇಷ್ಠ ಚಿಂತನಾ ಪುರುಷರಿಗೆ ಜನ್ಮಕೊಟ್ಟ ಮಹಾರಾಷ್ಟ್ರದ ಉನ್ನತ ಸಂಸ್ಕೃತಿಗೆ ಬೆಳಗಾವಿ ಮರಾಠಿಗರು ತಮ್ಮ ಸಣ್ಣತನ ಮತ್ತು ಅಸಹನೆಯನ್ನು ತೋರ್ಪಡಿಸುತ್ತಾ ಕಳಂಕ ತರುವಂಥ ಕೆಲಸ ಮಾಡಬಾರದು. ಕರ್ನಾಟಕದಲ್ಲಿ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಮರಾಠಿ ಭಾಷಿಕರು ಹರಡಿದ್ದಾರೆ. ಅವರೆಲ್ಲರೂ ಸ್ಥಳೀಯ ಜನರೊಂದಿಗೆ ಬೆರೆತುಕೊಂಡು ಸುಖಜೀವನ ನಡೆಸುತ್ತಿದ್ದಾರೆ.

ಬೆಳಗಾವಿಯಲ್ಲಿಯ ಮರಾಠಿಗರು ರಾಜಕೀಯ ಚದುರಂಗ ಆಟದ ದಾಳಗಳಾಗಿ ತಮ್ಮ ಮೂಲ ಸುಸಂಸ್ಕೃತಿಯನ್ನು ಮರೆತು, ವಿಕಾರಪೂರ್ಣ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದು ತರವಲ್ಲ. ಭಾರತದ ಒಕ್ಕೂಟ ವ್ಯವಸ್ಥೆಗೆ ಅನುಗುಣವಾದ ಸಂವಿಧಾನವನ್ನು ರಚಿಸಿದವರು ಮಹಾರಾಷ್ಟ್ರದ ಡಾ|| ಅಂಬೇಡ್ಕರವರೇ. ಒಕ್ಕೂಟ ವ್ಯವಸ್ಥೆಗೆ ಹೊಂದಿಕೊಂಡು ಕನ್ನಡಿಗರು ಬಾಳುತ್ತಿದ್ದಾರೆ. ಕರ್ನಾಟಕಕ್ಕೆ ನ್ಯಾಯಾವಾಗಿ ಸೇರಬೇಕಾಗಿದ್ದ ಸೊಲ್ಲಾಪುರ, ಅಕ್ಕಲಕೋಟೆ ಮತ್ತು ಜತ್ ಮುಂತಾದ ಊರುಗಳು ಮಹಾರಾಷ್ಟ್ರಕ್ಕೆ ಸೇರಿದ್ದರೂ ಕಾಸರಗೂಡಿನಂತ ಅಚ್ಚ ಕನ್ನಡ ಪ್ರದೇಶ ಕೇರಳಕ್ಕೆ ಸೇರಿದ್ದರೂ, ತಾಳ್ವಾಡಿ,

ನೀಲಗಿರಿಯಂತ ಕನ್ನಡ ಪ್ರದೇಶಗಳು ತಮಿಳುನಾಡಿಗೆ ಸೇರಿದ್ದರೂ ಕನ್ನಡಿಗರು ಅವುಗಳ ಕರ್ನಾಟಕ ಸೇರ್ಪಡೆಗಾಗಿ ಬೆಳಗಾವಿಯಲ್ಲಿಯ ಮರಾಠಿಗರು ಮಾಡುತ್ತಿರುವಂಥ ಅಸಂವಿಧಾನಿಕ ಹೋರಾಟವನ್ನು ಮಾಡುತ್ತಿಲ್ಲ. ಮಹಾಜನ ಆಯೊಗದ ತೀರ್ಪನ್ನೇ ಒಪ್ಪಿಕೊಂಡು ತಾವಿರುವ ಪ್ರದೇಶದಲ್ಲಿಯೇ ಕನ್ನಡಿಗರು ಅಲ್ಲಿಯ ಜನರೊಂದಿಗೆ ಹೊಂದಿಕೊಂಡು ಜೀವನ ನಡೆಸುತ್ತಿದ್ದಾರೆ.

ಬೆಳಗಾವಿ ಸಮಸ್ಯೆಗೆ ಇನ್ನೊಂದು ಮುಖ್ಯ ಕಾರಣ, ಮರಾಠಿಗರು ಕನ್ನಡ ಭಾಷೆಯನ್ನು ಕಲಿಯುವುದರಲ್ಲಿ ಉತ್ಸಾಹ ತೋರಿಸದೆ ಇರುವುದು. ಕನ್ನಡ ಭಾಷೆಯನ್ನು ತಿಳಿಯದೆ ಇರುವ ಮರಾಠಿಗರು ಕನ್ನಡ ಭಾಷೆಯಲ್ಲಿರುವ ಉತ್ತಮ ಸಾಹಿತ್ಯ ಮತ್ತು ಪ್ರತಿಪಾದಿತವಾಗಿರುವ ವಿಶ್ವಮಾನವ ವಿಚಾರಗಳಿಂದ ವಂಚಿತರಾಗಿದ್ದಾರೆ. ಈ ವಿಷಯಗಳನ್ನು ಅವರು ತಿಳಿದಿದ್ದೇ, ಆದರೆ ಮರಾಠಿಗರು ಕನ್ನಡ ಭಾಷೆಯನ್ನು ಮತ್ತು ಕನ್ನಡಿಗರನ್ನು ಪ್ರೀತಿಸುವುದರಲ್ಲಿ ಸಂದೇಹವಿಲ್ಲ. ಇಂಥ ಸಾಂಸ್ಕೃತಿಕ ಕಾರ್ಯವನ್ನು ಕರ್ನಾಟಕ ರಾಜ್ಯದ ಗಡಿ ರಕ್ಷಣಾ ಸಮಿತಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಬಿರುಸಾಗಿ ಮಾಡಬೇಕು. ಕನ್ನಡ ಕಲಿಯುವ ಮತ್ತು ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವ ಮರಾಠಿ ಮತ್ತು ಇತರ ಭಾಷಾ ವಿದ್ಯಾರ್ಥಿಗಳಿಗೆ ಧನ ಸಹಾಯದ ಜೊತೆಗೆ ಇತರ ಪ್ರೋತ್ಸಾಹಗಳನ್ನು ಕೊಡುವ ಕೆಲಸವನ್ನು ಮಾಡಬೇಕು ಇದೇ ರೀತಿ ಮಹಾರಾಷ್ಟ್ರ ಸರ್ಕಾರವುಮರಾಠಿ ಕಲಿಯುವ ಕನ್ನಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡಬೇಕು. ಈಗಾಗಲೇ ಪುಣೆ ನಗರದಲ್ಲಿರುವ ಕನ್ನಡ–ಮರಾಠಿ ಮೈತ್ರಿ ಕೂಟದ ಚಟುವಟಿಕೆಗಳು ಬೆಳಗಾವಿಯಲ್ಲಿ ನಡೆಯುವಂತೆ ಮಾಡಬೇಕು. ಬೆಳಗಾವಿಯ ಸಮಸ್ಯೆಯನ್ನು ಕೇವಲ ಕಾನೂನು ಶಿಸ್ತಿನ ಸಮಸ್ಯೆಯೆಂದು ಪರಿಭಾವಿಸದೆ ಸಾಂಸ್ಕೃತಿಕ ಮತ್ತು ಅಂತರ್‌ಭಾರತೀಯ ಏಕತೆ ಉಂಟುಮಾಡಬೇಕಾದ ಸಮಸ್ಯೆಯೆಂದು ಪರಿಭಾವಿಸಬೇಕು. ಸಾನೇ ಗುರೂಜೀಯಂಥ ವಿಚಾರವಂತರು ಅಂತರ್‌ಭಾರತೀ ಎಂಬ ಆಂದೋಲನವನ್ನು ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ಬೆಳಗಾವಿಯಲ್ಲಿ ಕನ್ನಡ ಮತ್ತು ಮರಾಠಿ ಮೈತ್ರಿ ಬಾಂಧವ್ಯಕ್ಕಾಗಿ ಈ ಅಂತರ್‌ಭಾರತಿ ಸಂಸ್ಥೆಯ ಸೇವೆಯನ್ನು ಸಹ ಪಡೆಯಬಹುದಾಗಿದೆ.

ಪ್ರಿಯ ಮರಾಠಿಗರೇ, ದಯಮಾಡಿ ಮೇಲ್ಕಾಣಿಸಿದ ವಿಚಾರಗಳ ಬಗ್ಗೆ ಗಂಭೀರವಾಗಿ ಆಲೋಚಿಸಿ ಸರಿಯಾದ ದಿಕ್ಕಿನಲ್ಲಿ ಪ್ರವರ್ತಿಸಬೇಕಾಗಿ ಪ್ರಾರ್ಥನೆ.

ತಲಾಖ್ ಎಂಬ ತೂಗುಗತ್ತಿ ಮತ್ತು ಪೂರ್ವಗ್ರಹ

– ಸಾರಾ ಅಬುಬಕರ್

(ಮುಸ್ಲಿಂ ಸಮುದಾಯದಲ್ಲಿ ಇರುವ ತಲಾಖ್ ಪದ್ಧತಿ ಕುರಿತಾಗಿ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಈ ಲೇಖನ ಪರಾಮರ್ಶೆಗೆ ಯೋಗ್ಯವಾಗಿದೆ.)

ಪ್ರವಾದಿ ಮೊಹಮ್ಮದ್ ಒಬ್ಬರೇ ಇಸ್ಲಾಂ ಧರ್ಮದ ಸ್ಥಾಪಕರಾಗಿದ್ದರೂ ಅವರ ಮರಣಾನಂತರ ಈ ಧರ್ಮದ ಅನುಯಾಯಿಗಳು ಹಲವಾರು ವಿಭಾಗಗಳಾಗಿ ವಿಭಜನೆಗೊಂಡಿದ್ದಾರೆ. ಪ್ರವಾದಿಗಳ ಪ್ರಧಾನ ಅನುಂಯಾಯಿಗಳ ಭಿನ್ನಾಭಿಪ್ರಾಯಗಳಿಂದಾಗಿ ಪ್ರಾರಂಭದಲ್ಲಿ ಸುನ್ನಿ ಮತ್ತು ಶಿಯಾ ಎಂಬ ಎರಡು ಪಂಗಡಗಳಾದವು. ಸುನ್ನಿಗಳು ಪ್ರವಾದಿಗಳ ಪ್ರಥಮ ಅನುಯಾಯಿ ಅಬೂಬಕ್ಕರ್ ಸಿದ್ಧಿಖ್ ಅವರ ಬೆಂಬಲಿಗರಾಗಿದ್ದಾರೆ, ಶಿಯಾ ಪಂಗಡವು ಪ್ರವಾದಿಗಳ ನಾಲ್ಕನೇ ಅನುಯಾಯಿಯೂ,ಅವರ ಅಳಿಯನೂ, ದಾಯಾದಿಯೂ ಆಗಿದ್ದ ಹಲಿ ಅವರ ಬೆಂಬಲಿಗರಾಗಿದ್ದಾರೆ.

ಈ ಎರಡು ಪಂಗಡಗಳಲ್ಲಿ ಪರಸ್ಪರ ಎಷ್ಟೊಂದು ದ್ವೇಷವಿದೆಯಂದರೆ ಸುನ್ನಿಗಳು, ಶಿಯಾ ಪಂಗಡದವರನ್ನು ಮುಸ್ಲಿಮರೇ ಅಲ್ಲವೆನ್ನುತ್ತಾ ಪಾಕಿಸ್ತಾನದಲ್ಲಿ ಅವರ ಮಸೀದಿಗಳಿಗೆ ಬೆಂಕಿ ಹಚ್ಚುವುದು, ಮಸೀದಿಯಲ್ಲಿ ಪ್ರಾರ್ಥನೆ ಮಾಡುವವರನ್ನು ಹತ್ಯೆ ಮಾಡುವ ಮಟ್ಟಕ್ಕೆ ದ್ವೇಷ ಬೆಳೆದಿದೆ. ಈಗ ಈ ಎರಡೂ ಪಂಗಡಗಳು ಒಡೆದು ಹಲವಾರು ಹೋಳುಗಳಾಗಿವೆ.

ಇಡೀ ಮುಸ್ಲಿಂ ಸಮಾಜದಲ್ಲಿ ಇಷ್ಟೊಂದು ಭಿನ್ನಾಭಿಪ್ರಾಯಗಳು, ವಿವಿದ ಗುಂಪುಗಳು ಇದ್ದರೂ ಮಹಿಳೆಯರ ಒಳಿತಿಗಾಗಿ ಸರ್ಕಾರವು ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಕೆಲವು ಬದಲಾವಣೆಗಳು ಆಗಬೇಕೆಂದು ಪ್ರಯತ್ನಿಸಿದರೆ, ಆಗ ಈ ಎಲ್ಲ ಪಂಗಡಗಳ ಪುರುಷರೂ ಒಂದಾಗಿ, ಒಕ್ಕೊರಲಿನಿಂದ ಸರ್ಕಾರದ ಪ್ರಯತ್ನವನ್ನು ವಿರೋಧಿಸಿ,ಅದಾಗದಂತೆ ತಡೆಯುತ್ತಾರೆ. ಅಂತಹ ತಡೆಯೊಡ್ಡಲು ಅವರು ಕುರ್‌ಆನ್ ವಾಕ್ಯಗಳನ್ನೂ ದೂರ ತಳ್ಳುತ್ತಾರೆ. ಉದಾಹರಣೆಗೆ, ತಲಾಖ್ ನೀಡಿದ ಮಹಿಳೆಗೆ ಜೀವನಾಂಶ ನೀಡಿ ಮುಂದಿನ ಬದುಕಿಗೆ ತೊಂದರೆಯಾಗದಂತೆ ಆಕೆಗೆ 'ಮತಾಃ' (ಜೀವನಾಂಶ) ನೀಡಬೇಕೆಂದು ಕುರ್‌ಆನ್ ಸ್ಪಷ್ಟವಾಗಿ ಬೋಧಿಸಿದ್ದರೂ 'ವಿಚ್ಛೇದಿತ ಮುಸ್ಲಿಂ ಮಹಿಳೆಯರ ಹಕ್ಕು ರಕ್ಷಣಾ ಮಸೂದೆ' ಎಂಬ ಹೊಸ ನಿಯಮದಲ್ಲಿ ಈ ವಾಕ್ಯ ಸೇರ್ಪಡೆಯಾಗಲೇ ಇಲ್ಲ!

ಕೆಲವು ವರ್ಷಗಳ ಹಿಂದೆ (೨೦೦೮ರ ಅಕ್ಟೋಬರ್ ೨೮) ಕೇರಳ ಹೈಕೋರ್ಟ್ ಒಂದು ತೀರ್ಪು ನೀಡಿದ್ದು, ವಿವಾದವೇ ಸೃಷ್ಟಿಯಾಯಿತು. ತ್ರಿಶ್ಯೂರಿನ ಸೈದಾಲಿ ಎಂಬಾತ ಎರಡನೇ ಮದುವೆಯಾದಾಗ, ಆತನ ಮೊದಲ ಪತ್ನಿ ಸೆಲೀನಾ ತನಗೆ ವಿಚ್ಛೇದನ ಬೇಕೆಂದು ನ್ಯಾಯಾಲಯಕ್ಕೆ ಹೋದರು. ಆಗ ಕೆಳ ನ್ಯಾಯಾಲಯ ವಿಚ್ಛೇದನಕ್ಕೆ ಆಕೆಗೆ ಅನುಮತಿ ನೀಡಿತು. ಆಕೆಯ ಗಂಡ ಈ ತೀರ್ಪಿನ ವಿರುದ್ಧ ಹೈಕೋರ್ಟಿಗೆ ಹೋದಾಗ, ಅದು ಈ ತೀರ್ಪನ್ನು ರದ್ದುಪಡಿಸಿತು. ಗಂಡ ಎರಡನೇ ವಿವಾಹ ಆದನೆಂಬ ಒಂದೇ ಕಾರಣಕ್ಕೆ ಮುಸ್ಲಿಂ ಪತ್ನಿಗೆ ವಿಚ್ಛೇದನ ನೀಡಲು ಇಂದು ಭಾರತದಲ್ಲಿ ಜಾರಿಯಲ್ಲಿರುವ 'ಮುಸ್ಲಿಂ ವೈಯಕ್ತಿಕ ಕಾನೂನು' ಅನುಮತಿ ನೀಡುವುದಿಲ್ಲ ಎಂಬುದು ಈ ರದ್ದತಿಗೆ ಕಾರಣವಾಗಿತ್ತು. ಧಾರ್ಮಿಕ ನಿಯಮಗಳು ಮತ್ತು ಸಾಮಾಜಿಕ ನಿಯಮಗಳಿಗೆ ಒಪ್ಪಿಗೆಯಾಗದ ಬಹುಪತ್ನಿತ್ವ ಹಾಗೂ ಏಕಪಕ್ಷೀಯವಾದ ತಲಾಖ್ ಪದ್ಧತಿ ಮುಸ್ಲಿಮರಲ್ಲಿದೆ ಎಂಬುದನ್ನು ತಿಳಿದ ನ್ಯಾಯಾಲಯ, ಇದನ್ನು ನಿಯಂತ್ರಿಸಲು ಪ್ರಾದೇಶಿಕವಾಗಿಯೂ, ದೇಶೀಯವಾಗಿಯೂ ಸಮಿತಿಗಳನ್ನು ರಚಿಸಿ,ಇದಕ್ಕಾಗಿ ನಿಯಮಗಳನ್ನು ರೂಪಿಸಬೇಕಾದ ಅಗತ್ಯವಿದೆಯೆಂದು ಹೇಳಿತು.

ಹೀಗೊಂದು ಸಮಿತಿ ರಚನೆ ಆಗಬೇಕೆಂದದ್ದಕ್ಕೇ ಮತ್ತೊಂದು ವಿವಾದ ಆರಂಭವಾಯಿತು. ಇದು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಹಸ್ತಕ್ಷೇಪ ಎಂದು ಹೇಳಿದ ಸುನ್ನಿ ವಿಭಾಗ, ಅದನ್ನು ವಿರೋಧಿಸಬೇಕೆಂದಿತು. ಮುಜಾಹಿದ್ ವಿಭಾಗ ಮೌನವಾಯಿತು. ಜಮಾಅತೇ ಇಸ್ಲಾಮಿ ಈ ನಿರ್ದೇಶನವನ್ನು ಸ್ವಾಗತಿಸಿತು. 'ವಿರೋಧಿಸುವವರೂ, ಮೌನವಾಗಿ ಕುಳಿತವರೂ, ಸ್ವಾಗತಿಸುವವರೂ ಒಟ್ಟು ಸೇರಿ ಇನ್ನು ಯಾವಾಗ ಯದ್ಧಕ್ಕೆ ಹೊರಡುವರೆಂಬುದು ನನ್ನ ಸಂದೇಹ' ಎಂದು ಪ್ರೊ. ಕಾರಶ್ಯೇರಿಯವರು ಬರೆದಿದ್ದಾರೆ. ಕಾರಶ್ಯೇರಿಯವರ ನಿರೀಕ್ಷೆಯಂತೆಯೇ ಈಗ ಇಸ್ಲಾಂ ಸಮಾಜದ ಎಲ್ಲ ಪುರುಷರೂ ಒಟ್ಟು ಸೇರಿ, ಬಾಯಿ ಮಾತಿನಲ್ಲಿ ಒಂದೇ ಉಸಿರಿನಲ್ಲಿ ಮೂರು ಬಾರಿ ತಲಾಖ್ ಹೇಳಿ ಹೆಣ್ಣೊಬ್ಬಳನ್ನು ನಿರ್ಗತಿಕಳನ್ನಾಗಿಸುವ ನಿಯಮದ ತಿದ್ದುಪಡಿಗೆ ಸರ್ಕಾರ ಮುಂದಾಗುವುದನ್ನು ವಿರೋಧಿಸಲು ಪ್ರಾರಂಭಿಸಿದ್ದಾರೆ. ಇಸ್ಲಾಂ ಧಾರ್ಮಿಕ ನಿಯಮದಲ್ಲಿ ಸರ್ಕಾರದ ಹಸ್ತಕ್ಷೇಪವೆಂಬ ಕೂಗು ಆರಂಭವಾಗಿದೆ. ವಿವಾಹ, ವಿಚ್ಛೇದನ, ಜೀವನಾಂಶ ಇವೆಲ್ಲವೂ ನಾಗರಿಕ ನಿಯಮಗಳೇ ಹೊರತು ಧಾರ್ಮಿಕ ನಿಯಮಗಳಲ್ಲ. 'ನೀವು ಯಾವ ದೇಶದಲ್ಲಿ ಬದುಕುತ್ತಿದ್ದೀರೊ ಆ ದೇಶದ ನಾಗರಿಕ ನಿಯಮಗಳನ್ನು ಅನುಸರಿಸಿ' ಎಂಬುದು ಪ್ರವಾದಿಗಳ ಉಪದೇಶವಾಗಿದೆ.

ಮುಸ್ಲಿಂ ಧಾರ್ಮಿಕ ನಿಯಮಗಳೆಂದ್ರರೆ, ನಿರಾಕಾರನಾದ ಏಕ ದೇವನಲ್ಲಿ ವಿಶ್ವಾಸ, ನಮಾಜ್, ಉಪವಾಸ ವ್ರತ, ಕಡ್ಡಾಯ ದಾನ, ಹಜ್ ಯಾತ್ರೆ ಇತ್ಯಾದಿ. ಈ ನಿಯಮಗಳಲ್ಲಿ ಸರ್ಕಾರ ಎಂದೂ ಹಸ್ತಕ್ಷೇಪ ಮಾಡುವುದಿಲ್ಲ.

ಇನ್ನು ಏಕರೂಪ ನಾಗರೀಕ ಸಂಹಿತೆ ಕುರಿತು ಚಿಂತಿಸೋಣ. ನಮಗೆ

ಏಕರೂಪ ನಾಗರಿಕ ಸಂಹಿತೆ ಬೇಡವಾದರೆ ಈಗ ಎಲ್ಲರಿಗೂ ಸಮಾನವಾಗಿ ಅನ್ವಯವಾಗುತ್ತಿರುವ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಕ್ರಿಮಿನಲ್ ಪ್ರೊಸೀಜರ್ ಕೋಡ್) ಯಾಕೆ ಬೇಕು? ಮುಸ್ಲಿಂರು ತಮ್ಮದೇ ದಂಡ ಪ್ರಕ್ರಿಯಾ ಸಂಹಿತೆಗೇ ಅಂಟಿಕೊಳ್ಳಬಹುದಲ್ಲವೇ? ಕದ್ದಾತನ ಕೈ ಕಡಿಯಬೇಕು, ಕೊಲೆ ಮಾಡಿದವನ ತಲೆಯನ್ನು ಸಾರ್ವಜನಿಕ ಸ್ಥಳದಲ್ಲಿ ಕಡಿಯಬೇಕು, ಹೆಂಡ ಕುಡಿದವನಿಗೆ ನೂರು ಛಡಿ ಏಟು ನೀಡಬೇಕು, ಅನೈತಿಕ ಸಂಬಂಧ ಹೊಂದಿದ ಗಂಡು ಅಥವಾ ಹೆಣ್ಣಿಗೆ ನೂರು ಛಡಿ ಎಡಿನ ಶಿಕ್ಷೆ ನೀಡಬೇಕು... ಈ ರೀತಿ ಅಪರಾಧ ಎಸಗುವ ಮುಸ್ಲಿಮರಿಗೆ ಈ ದಂಡ ಸಂಹಿತೆಯೇ ಜಾರಿಗೆ ಬರಲಿ ಎನ್ನಲಾಗುತ್ತದೆಯೇ? ಅಂಥ ಶಿಕ್ಷೆ ಅನುಭವಿಸಿದವರಿಗೆ ಸ್ವರ್ಗದಲ್ಲಿ ಸೀಟು ಮೀಸಲಿಡಲಾಗುತ್ತದೆ!

ಕೇರಳದ ಕಾಂತಾಪುರಂ ಅಬೂಬಕ್ಕರ್ ಮೌಲವಿ ಮತ್ತು ಹಲವಾರು ಮದ್ರಸಾ ಧರ್ಮಗುರುಗಳು ಮಹಿಳೆಯರನ್ನು ಅವಮಾನಿಸುವ ರೀತಿ ಹೇಳಿಕೆ ನೀಡುತ್ತಾರೆ. ಆಕೆ ಪುರುಷನ ಸುಖ ಜೀವನಕ್ಕಾಗಿಯೇ ಸೃಷ್ಟಿಯಾದ ಒಂದು ನಿರ್ಜೀವ ವಸ್ತು ಎಂಬಂತೆ ಚಿತ್ರಿಸುತ್ತಾರೆ. ಬಹುಪತ್ನಿತ್ವವನ್ನು ಸಮರ್ಥಿಸುತ್ತಾ ಕಾಂತಾಪುರಂ ಹೀಗೆಂದಿದ್ದರು: 'ಮಹಿಳೆಯರಿಗೆ ತಿಂಗಳಿಗೊಮ್ಮೆ ಮುಟ್ಟಾಗುತ್ತದೆ. ಕೆಲವರಿಗೆ ಐದಾರು ದಿನಗಳಾದರೆ ಇನ್ನು ಕೆಲವರಿಗೆ ಹತ್ತು ದಿನಗಳವರೆಗೆ ಇದು ಇರುತ್ತದೆ. ಆಗಲೂ ಪುರುಷರಿಗೆ ಸುಖಜೀವನಕ್ಕೆ ಹೆಣ್ಣಿನ (ಆಕೆಯ ದೇಹದ) ಅಗತ್ಯವಿರುತ್ತದೆ. ಅದಕ್ಕಾಗಿ ಇಸ್ಲಾಂ ದಮ್ ಬಹುಪತ್ನಿತ್ವವನ್ನು ಅನುಮತಿಸಿದೆ'.

ಹೆಣ್ಣೆಂದರೆ ಗಂಡಿಗೆ ಬೇಕಾದಾಗ ಬೇಕಾದಂತೆ ಉಪಯೋಗಿಸಲು ಇರುವ ಒಂದು ನಿರ್ಜೀವ ವಸ್ತು. ಬೇಡವಾದರೆ ಒಂದೇ ಉಸಿರನಲ್ಲಿ ಮೂರು ಬಾರಿ ತಲಾಖ್ ಎಂದು ಬಿಟ್ಟು ಹೊರಗಟ್ಟಿದರಾಯಿತು! ಕಾಂಗ್ರೆಸ್ ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಇಬ್ರಾಹಿಂ ಕೋಡಿಜಾಲ್ ಅವರು ಕೂಡ ಇದೇ ಮಾತನ್ನು ಇತ್ತಿಚೆಗೆ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ. ಪುರುಷ ಪಧಾನ ವ್ಯವಸ್ಥೆಯಲ್ಲಿ ಧರ್ಮಗುರುಗಳ ಮನದಾಳದಲ್ಲೂ ಹೆಣ್ಣೆಂದರೆ ತಮ್ಮ ಸುಖಕ್ಕಾಗಿಯೇ ಇರುವ ವಸ್ತು ಎಂಬ ಭಾವನೆ ಬೇರೂರಿದೆ.

ಇನ್ನು 'ಅಖಿಲ ಭಾರತ ಮುಸ್ಲಿಂ ವೈಯ್ಯಕ್ತಿಕ ಕಾನೂನು ಮಂಡಳಿ' ಭಾರತದ ಎಲ್ಲ ಮುಸ್ಲಿಮರ ಪ್ರಾತಿನಿಧಿಕ ಸಂಘಟನೆ ಅಲ್ಲ. ಅವರು ಎಂತಹ ನಿಯಮವನ್ನು ನಮ್ಮ ಮೇಲೆ ಹೇರಿದರೂ ನನ್ನಂತಹವರ ಕುಟುಂಬಕ್ಕೆ ಅದು ಅನ್ವಯಿಸುವುದಿಲ್ಲ. ಪ್ರವಾದಿಗಳು ಎಂದೂ ಇಂತಹ ಸಂಘಟನೆ ಸ್ಥಾಪಿಸಿ ಅದರ ಆದೇಶದಂತೆ ಮುಸ್ಲಿಮರು ಬದುಕಬೇಕೆಂದು ಹೇಳಿಲ್ಲ. ನಾನು ಮತ್ತು ನನ್ನ ಕುಟುಂಬ ಈ ದೇಶದ ಸಂವಿಧಾನಕ್ಕನುಸಾರವಾಗಿ ಬದುಕುತ್ತಿದ್ದೇವೆ.

ಏಕರೂಪ ನಾಗರಿಕ ಸಂಹಿತೆಯನ್ನು ವಿರೋಧಿಸಲು ಎಂತೆಂತಹ

ಸುಳ್ಳುಗಳನ್ನೆಲ್ಲ ತೇಲಿ ಬಿಡಲಾಗುತ್ತಿದೆ. ಈ ನಿಯಮ ಜಾರಿಗೆ ಬಂದರೆ ಮುಸ್ಲಿಮರು ಮೃತರಾದಾಗ ಗೋರಿ ಕಟ್ಟಲು ಸಾಧ್ಯವಾಗದು, ಅವರನ್ನು ದಹಿಸಬೇಕಾಗಬಹುದು; ಆದುದರಿಂದ ನಾವು ಈಗಲೇ ಜಾಗೃತರಾಗಿ ಈ ನಿಯಮ ಬರದಂತೆ ತಡೆಯಬೇಕು ಎಂದು ಫೇಸ್‌ಬುಕ್‌ನಲ್ಲಿ ಸಂದೇಶ ನೀಡಲಾಗುತ್ತಿದೆ. ಮೃತರಾದಾಗ ಗೋರಿ ಕಟ್ಟುವುದು ಮುಸ್ಲಿಮರು ಮಾತ್ರವಲ್ಲ, ಹಿಂದೂಗಳಲ್ಲೂ ಹಲವು ಜಾತಿಗಳಲ್ಲಿ ಮಣ್ಣು ಮಾಡುವ ಪದ್ಧತಿ ಇದೆ. ಇಂಥ ಸುಳ್ಳುಗಳನ್ನು ತೇಲಿಬಿಟ್ಟು ಅನಕ್ಷರಸ್ಥ ಮುಸ್ಲಿಂ ಮಹಿಳೆಯರು ಹಾದಿ ತಪ್ಪಿಸಲಾಗುತ್ತಿದೆ. ಮುಸ್ಲಿಂ ಮಹಿಳೆಯರು ಈಗಲಾದರು ತಮ್ಮ ಮೌನ ಮುರಿದು, ಒಂದೇ ಉಸಿರಿನಲ್ಲಿ ಮೂರು ಬಾರಿ ತಲಾಖ್ ಹೇಳುವುದರ ವಿರುದ್ಧ ತಮ್ಮ ಅನಿಸಿಕೆಗಳನ್ನು ಹೇಳಬೇಕು. ಶಾಯಿರಾ ಬಾನು ಎಂಬ ಮಹಿಳೆಗೆ ಗಂಡ ಈ ರೀತಿ ತಲಾಖ್ ನೀಡಿದ್ದು ಮಾತ್ರವಲ್ಲ ಆಕೆ ತನ್ನ ಮಕ್ಕಳೊಡನೆ ಫೋನಿನಲ್ಲೂ ಮಾತನಾಡದಂತೆ ನಿರ್ಬಂಧ ಹೇರಿದ್ದಾನೆ. ಇಬ್ಬರು ಮಕ್ಕಳಾದ ಬಳಿಕ ಆಕೆಗೆ ನಾಲ್ಕೈದು ಬಾರಿ ಗರ್ಭಪಾತ ಮಾಡಿಸಿದ್ದಾನೆ. ಮಹಿಳೆಯರು ಇಂಥ ಸರ್ವಾಧಿಕಾರಿ ಮನೋಭಾವವನ್ನು ಅರ್ಥಮಾಡಿಕೊಳ್ಳಬೇಕು. ಇಂದು ಪಾಕಿಸ್ತಾನ, ಬಾಂಗ್ಲಾದೇಶ, ಅರಬ್ ದೇಶ ಮುಂತಾದೆಡೆಗಳಲ್ಲಿ ಒಮ್ಮೆಗೇ ಮೂರು ಬಾರಿ ತಲಾಖ್ ಹೇಳುವದನ್ನು ರದ್ದುಪಡಿಸಲಾಗಿದೆ.

ಈ ಸಂದರ್ಭದಲ್ಲಿ ನನಗೆ ಒಂದು ವಿಷಯ ನೆನಪಾಗುತ್ತಿದೆ. ಕಾಂಗ್ರೆಸ್ ಸಬರ, ವಿಚ್ಛೇದಿತ ಮಹಿಳೆಗೆ ಜೀವನಾಂಶ ಕೊಡುವುದು ಬೇಡ ಎಂಬ ನಿಯಮ ಜಾರಿಗೊಳಿಸಿದ ಸಂದರ್ಭ ಅದಾಗಿತ್ತು. ಆ ಸಮಯದಲ್ಲಿ ಒಂದು ಮದ್ರಸಾದ ಬಡ ಮೌಲ್ವಿಯೊಬ್ಬರು ನನ್ನ ಬಳಿ ಬಂದು ತಮ್ಮ ದುಃಖ ತೋಡಿಕೊಂಡರು. ಅವರು ಸಾಲ ಮಾಡಿ ಮಗಳ ಮದುವೆ ಮಾಡಿ, ಅಳಿಯನನ್ನು ಕೊಲ್ಲಿ ರಾಷ್ಟ್ರವೊಂದಕ್ಕೆ ಕಳುಹಿಸಿದ್ದರು. ಒಂದು ವರ್ಷವಾಗುತ್ತಿದ್ದಂತೆ ಆತ ಅವರ ಮಗಳಿಗೆ ಪತ್ರದ ಮೂಲಕ ತಲಾಖ್ ಕಳುಹಿಸಿದ್ದ. ಇದಕ್ಕೆ ಏನಾದರೂ ಮಾಡಲು ಸಾಧ್ಯವಿದೆಯೇ ಎಂದು ಕೇಳಲು ಅವರು ನ್ನ ಬಳಿ ಬಂದಿದ್ದರು. ಆಗ ನಾನೆಂದೆ, 'ದೇಶದಾದ್ಯಂತ ಮುಸ್ಲಿಮರ ತಲೆ ಕೆಡಿಸಿ, ನಮ್ಮ ದರ್ಮದಲ್ಲಿ ಸರ್ಕಾರದ ಹಸ್ತಕ್ಷೇಪವೆಂದು ಕೆಲವು ಮುಂತಾದ ಸಂಘಟನೆಗಳು ಕೂಗಾಡಿದವಲ್ಲ. ನೀವು ಹೋಗಿ ಅವರೊಡನೆ ಕೇಳಿ ತಲಾಖ್ ಪಡೆದ ಮಹಿಳೆಯರಿಗೆ ವಕ್ಫ್ ಮಂಡಳಿ ಜೀವನಾಂಶ ಕೊಡಬೇಕೆಂದು ಸರ್ಕಾರ ನಿಯಮ ಮಾಡಿದೆ! ಅವರೊಡನೆ ಕೇಳಿ ನಿವು ನಿಮ್ಮಂತಹವರು ತಾನೇ ಈ ಮತಾಂಧರಿಗೆ ಬೆಂಬಲ ನೀಡಿದ್ದು? ಈಗ ನಿಮ್ಮ ಮಗಳ ಬದುಕಿನಲ್ಲೇ ಅಂಥ ದುರ್ಘಟನೆ ನಡೆದು ಆಕೆ ನಿರ್ಗತಿಕಳಾದಾಗ ನಿಮಗೆ ನೋವಾಯಿತು. ನಿಮ್ಮಂತಹ ಸಾವಿರಾರು ತಂದೆಯಂದಿರು ಇಂತಹ ನಿಯಮಗಳಿಂದಾಗಿ ನೋವಿನಿಂದ ನರಳುತ್ತಿದ್ದಾರೆ ಎಂಬ ಅರಿವು ನಿಮ್ಮಲ್ಲಿದ್ದಿದ್ದರೆ ಇಂಥ ನಿಯಮ ಜಾರಿಯಾಗುತ್ತಿರಲಿಲ್ಲ ಎಂದೆ ಆ ಮನುಷ್ಯ

ದುಃಖದ ಭಾರದಿಂದ ತಲೆ ತಗ್ಗಿಸಿ ನಡೆಯುತ್ತಾ ಮೆಲ್ಲಗೆ ಗೇಟು ದಾಟುತ್ತಿದ್ದುದನ್ನು ನೋಡಿದಾಗ ನನ್ನ ಕಣ್ಣುಗಳು ತುಂಬಿಕೊಂಡವು ಆ ದೃಶ್ಯ ಇಂದಿಗೂ ನನ್ನಮನಸ್ಸಿನಿಂದ ಮರೆಯಾಗಿಲ್ಲ.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬಂದರೆ ಮುಸ್ಲಿಂ ಹೆಣ್ಣು ಮಕ್ಕಳ ಬದುಕು ಎಷ್ಟೋ ಸುಧಾರಿಸಬಹುದು. ಆದುದರಿಂದ ಅವರ ತಲೆಯ ಮೇಲೆ ತೂಗಾಡುತ್ತಿರುವ ಈ ತ್ರಿವಳಿ ತಲಾಖ್ ಎಂಬ ಖಡ್ಗದಿಂದ ಅವರನ್ನು ರಕ್ಷಿಸಬೇಕಾಗಿದೆ. ಏಕರೂಪ ನಾಗರಿಕ ಸಂಹಿತೆ ಜಾರಿಯಾದರೆ ತಮ್ಮ ಹಕ್ಕಿನಿಂದ ತಾವು ವಂಚಿತರಾಗುತ್ತೇವೆಂಬ ಭಯ ಮುಸ್ಲಿಂ ಪುರುಷರನ್ನು ಕಾಡುತ್ತಿದೆ. ಆದುದರಿಂದ ಹೇಗಾದರೂ ಇದನ್ನು ತಡೆಯಬೇಕೆಂಬ ಹುನ್ನಾರ ಅವರದಾಗಿದೆ. ಇತ್ತ ಮುಸ್ಲಿಂ ಮಹಿಳೆಯರು ತ್ರಿವಳಿ ತಲಾಖ್ ಎಂಬ ಬೆಂಕಿಯಲ್ಲಿ ನರಳುತ್ತಿರುವಾಗ ಆ ಬೆಂಕಿಯಲ್ಲಿ ಚಳಿ ಕಾಯಿಸಿ ಕೊಳ್ಳಲು ಎಚ್.ಡಿ. ದೇವೇಗೌಡರಂಥ ರಾಜಕಾರಣಿಗಳು ಪ್ರಯತ್ನಿಸುತ್ತಿದ್ದಾರೆ. ಮುಸ್ಲಿಂ ಮಹಿಳೆಯರು ರಾಜಕಾರಣಿಗಳ ಹುನ್ನಾರವನ್ನೂ ಅರ್ಥ ಮಾಡಿಕೊಳ್ಳಬೇಕು.

ಇಷ್ಟೆಲ್ಲ ಹೇಳಿದ ಮೇಲೂ ಏಕರೂಪ ನಾಗರಕ ಸಂಹಿತೆ ಕುರಿತು ಕೆಲ ಮಾತುಗಳನ್ನು ಹೇಳಬೇಕಾಗಿದೆ. ಈ ಸಂಹಿತೆ ಹೇಗಿರಬೇಕು, ಅದರಲ್ಲಿ ಯಾವ್ಯಾವ ವಿಷಯಗಳು ಒಳಗೊಳ್ಳಬೇಕು ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು ಈ ಕುರಿತು ಲೋಕಸಭೆ, ರಾಜ್ಯಸಭೆ ಹಾಗೂ ಎಲ್ಲ ರಾಜ್ಯಗಳ ವಿಧಾನಸಭೆಗಳಲ್ಲೂ ಚರ್ಚೆ ನಡೆಯಬೇಕು ಆಮೇಲಷ್ಟೆ ಇದರ ಕುರಿತು ಕೊನೆಯ ತೀರ್ಮಾನ ಕೈಗೊಳ್ಳಬೇಕು ಎಂಬ ಅಭಿಪ್ರಾಯವೂ ವಿದ್ವಾಂಸರಿಂದ ವ್ಯಕ್ತವಾಗಿದೆ. ಒಮ್ಮೆ ಜಾರಿಗೆ ಬಂದ ಮೇಲೂ ತಿದ್ದುಪಡಿ ಮಾಡಲು ಅವಕಾಶ ಇದ್ದೆ ಇರುತ್ತದೆ. ಹಾಗಾಗಿ ಏಕರೋಪ ನಾಗರಿಕ ಸಂಹಿತೆ ಕುರಿತು ಯಾರೂ ಭಯಪಡಬೇಕಾದ ಅಗತ್ಯವಿಲ್ಲ.

ಇಂದು ಅಮೇರಿಕ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಬದುಕುತ್ತಿರುವವರು ಅಲ್ಲಿ ಜಾರಿಯಲ್ಲಿರುವ ಸಂವಿಧಾನವನ್ನು ಅನುಸರಿಸಬೇಕೇ ಹೊರತು ನಾಗರಿಕ ಜೀವನದಲ್ಲಿ ತಮ್ಮ ಧಾರ್ಮಿಕ ನಿಯಮಗಳಂತೆ ಬದುಕಲು ಸಾಧ್ಯವಿಲ್ಲ. ಒಮ್ಮೆಗೇ ಮೂರು ಬಾರಿ ತಲಾಖ್ ಹೇಳಿ ವಿಚ್ಛೇದನ ನೀಡುವುದಕ್ಕಾಗಲಿ, ವಿಚ್ಛೇದಿತೆಗೆ ಜೀವನಾಂಶ ನೀಡದೆ ಇರುವುದಕ್ಕಾಗಲಿ, ಅಲ್ಲಿನ ನಿಯಮಗಳು ಅವಕಾಶ ನೀಡುವುದಿಲ್ಲ. ಅಲ್ಲಿ ಬದುಕುವವರೆಲ್ಲರೂ ಅಲ್ಲಿನ ನಾಗರಿಕ ನಿಯಮಗಳಿಗೆ ಅನುಸಾರವಾಗಿ ಬದುಕುವುದು ಕಡ್ಡಾಯವಾಗಿದೆ.

ಸರ್ವೋದಯ ಆಂದೋಲನದ ಮುನ್ನಡೆ

ಕರ್ನಾಟಕ ರಾಜ್ಯದಲ್ಲಿ ಸರ್ವೋದಯ ಆಂದೋಲನವನ್ನು ಬಲಪಡಿಸಲು ಸಾಧ್ಯವಾಗುವಂತೆ ಮಾಡುವ ಪ್ರಯತ್ನದ ಅಂಗವಾಗಿ ೨೦೧೬ ಡಿಸೆಂಬರ್ ೯ ಮತ್ತು ೧೦ ರಂದು ಪ್ರಥಮ ಕರ್ನಾಟಕ ರಾಜ್ಯ ಸರ್ವೋದಯ ಸಮಾಜ ಸಮ್ಮೇಳನವನ್ನು ಮಂಡ್ಯ ಜಿಲ್ಲಾ ಮೇಲುಕೋಟೆಯಲ್ಲಿ ಆಯೋಜಿಸಲಾಗಿತ್ತು. ಸಮ್ಮೇಳನದಲ್ಲಿ ಐದುನೂರು ಜನರು ಭಾಗವಹಿಸಿದ್ದರು. ಅವರಲ್ಲಿ ಲೋಕ ಸೇವಕರು ಮತ್ತು ಸರ್ವೋದಯ ಮತ್ತು ಸರ್ವೋದಯ ಮಿತ್ರರು ಇದ್ದರು. ಯುವಕರ ಸಂಖ್ಯೆ ಅಧಿಕವಾಗಿತ್ತು. ಎರಡನೇ ದಿನ ನಡೆದ ಸಮ್ಮೇಳನದಲ್ಲಿ ಪ್ರಚಲಿತ ಒಂಭತ್ತು ವಿಷಯಗಳ ಬಗ್ಗೆ ವಿಚಾರಗೋಷ್ಠಿಗಳು ನಡೆದವು ಎಲ್ಲ ಗೋಷ್ಠಿಗಳು ಬೋಧಪ್ರದವಾಗಿದ್ದವು. ಮತ್ತು ಪರಿಣಾಮಕಾರಿಯಾಗಿದ್ದವು ಎಂದು ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕ ಪ್ರತಿನಿದಿಗಳ ಅಭಿಪ್ರಾಯವಾಗಿದೆ. ಪ್ರಶ್ನೋತ್ತರಕ್ಕೆ ಹೆಚ್ಚು ಕಾಲಾವಾಕಾಶ ಸಿಗದೇ ಇದ್ದುದಕ್ಕಾಗಿ ಹಲವಾರು ಪ್ರತಿನಿದಿಗಳು ವಿಶಾದ ವ್ಯಕ್ತಪಡಿಸಿದ್ದಾರೆ. ಸಮ್ಮೇಳನಕ್ಕೆ ಗುಲ್ಬರ್ಗಾ, ಬೀದರ್, ರಾಯಚೂರು, ಬೆಳಗಾವಿ ಕಾರವಾರ ಮತ್ತು ವಿಜಯಪುರ ಮುಂತಾದ ಜಿಲ್ಲೆಗಳಿಂದ ಪ್ರತಿನಿದಿಗಳು ಬರದೇ ಇದ್ದುದು ರಾಜ್ಯ ಮಟ್ಟದ ಸಮ್ಮೇಳನಕ್ಕೆ ಒಂದು ಕುಂದು ಎಂದು ಹೇಳಬಹುದು. ರಾಜ್ಯದ ಎಲ್ಲ ಮೂವತ್ತು ಜಿಲ್ಲೆಗಳಿಂದಲೂ ಪ್ರತಿನಿದಿಗಳು ಬರುವಂತೆ ಮಾಡುವುದರಲ್ಲಿ ವಿಫಲತೆ ಉಂಟಾಗಿದೆ. ಸಮ್ಮೇಳನದಲ್ಲಿ ಪ್ರಮುಖ ಸಮಾಜವಾದಿ ಚಿಂತಕ ಡಿ. ಎಸ್. ನಾಗಭೂಷಣ್‌ರವರು ಭಾಗವಹಿಸಿದ್ದರಲ್ಲದೆ ಸಮಾಜವಾದ ಮತ್ತು ಸರ್ವೋದಯ ಎಂಬ ವಿಷಯವಾಗಿಯೂ ಮಾತನಾಡಿ ಅವುಗಳಲ್ಲಿ ಹೇಗೆ ಸಾಮ್ಯತೆ ಇದೆ ಮತ್ತು ಗಾಂಧೀ ವಿಚಾರವನ್ನು ಹೆಚ್ಚಾಗಿ ಅನ್ವಯಿಸಿಕೊಳ್ಳದೆ ಸಮಾಜವಾದಿಗಳು ಹೇಗೆ ತಪ್ಪು ಮಾಡಿದರೆಂದು ನಾಗಭೂಷಣ್‌ರವರು ಹೇಳಿದರು. ಕವಿಯತ್ರಿ ಸವಿತಾನಾಗಭೂಷಣ್ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಹತ್ತಾರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಶ್ರೀಮಠದ್ ಅವರ ನೇತೃತ್ವದಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಔಷಧಿಗಳ ಕಲಬೆರೆಕೆ ಮತ್ತು ಉತ್ಪಾದನೆಯಲ್ಲಿಯ ಅವ್ಯವಹಾರಗಳ ವಿರುದ್ಧ ಹೋರಾಟ ಮಾಡುತ್ತಿರುವ ಡಾ॥ ಗೋಪಾಲ ದಾಬಡೆ ಎಲ್ಲ ಗೋಷ್ಠಿಗಳಲ್ಲಿ ಉಪಸ್ಥಿತರಿದ್ದು ಅವುಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಕರ್ನಾಟಕದಲ್ಲಿಯ ಮಹಿಳಾ ಕೃಷಿಕರ ಹಿತದ ಬಗ್ಗೆ

ಮತ್ತು ಹಕ್ಕುಗಳ ಬಗ್ಗೆ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಶಾರದ ಗೋಪಾಲರವರು ಸ್ವತಃ ಭಾಗವಹಿಸಿದರಲ್ಲದೆ ತಮ್ಮೊಂದಿಗೆ ತಮ್ಮ ಕ್ಷೇತ್ರದ ಐವತ್ತು ಜನ ಮಹಿಳೆಯರನ್ನು ಕರೆದುಕೊಂಡು ಬಂದದ್ದು ಕೂಡ ಮಹತ್ವದ ಸಂಗತಿಯಾಗಿತ್ತು. ರಾಯಚೂರು ಜಿಲ್ಲೆಯಲ್ಲಿ ಮದ್ಯಪಾನ ನಿಷೇಧದ ಅಗತ್ಯದ ಬಗ್ಗೆ ಜನಾಂದೋಲನ ನಡೆಸುತ್ತಿರುವ ಅಭಯ್ ಸಮ್ಮೇಳನಕ್ಕೆ ಬಂದು ತಮ್ಮ ಬೆಂಬಲವನ್ನು ಸೂಚಿಸಿದರು. ಅಖಿಲಭಾರತ ಸರ್ವೋದಯ ಸಮಾಜ ಸಂಯೋಜಕರಾದ ಶ್ರೀ ಆದಿತ್ಯ ಪಟ್ನಾಯಕ್ ಆಗಮಿಸಿ ಬದಲಾಗುತ್ತಿರುವ ಸಮಾಜಕ್ಕೆ ಸರ್ವೋದಯ ಸಿದ್ಧಾಂತ ಎಂಬ ವಿಷಯವಾಗಿ ಮಾತನಾಡಿದರು. ಅಖಿಲ ಭಾರತ ಸರ್ವೋದಯ ಮಂಡಳಿಯಲ್ಲಿ ಖಾದಿ ವಿಭಾಗದ ಸಂಯೋಜಕರಾದ ಅಶೋಕ ಶರಣ್ ಕೂಡ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. ಸಮ್ಮೇಳನದ ಸಂದರ್ಭದಲ್ಲಿ ಜನಪದ ವಿಚಾರದ ವಿಶೇಷ ಸಂಚಿಕೆಯನ್ನು ಪ್ರಕಟಿಸಿ ಪ್ರತಿನಿದಿಗಳಿಗೆ ಗೌರವ ಪ್ರತಿಯನ್ನು ಕೊಡಲಾಯಿತು. ಸಮ್ಮೇಳನಕ್ಕೆ ಅಗತ್ಯವಾದ ಹಣವನ್ನು ಸರ್ವೋದಯ ವಿಚಾರ ಪ್ರೇಮಿಗಳಿಂದ ಸಂಗ್ರಹಿಸಲಾಗಿತ್ತು. ಸಮ್ಮೇಳನದ ಕೊನೆಯಲ್ಲಿ ಸಮ್ಮೇಳನಕ್ಕಾಗಿಯಾದ ಜಮಾಖರ್ಚಿನ ಲೆಕ್ಕಪತ್ರವನ್ನು ಪ್ರಕಟಿಸಲಾಯಿತು. ಸಮ್ಮೇಳನದಲ್ಲಿ ಪ್ರಮುಖವಾದ ಎರಡು ವಿಷಯಗಳು ಚರ್ಚೆಗೆ ಬರದೆ ಇದ್ದದು ಸಮ್ಮೇಳನದಲ್ಲಿ ಉಂಟಾದ ಎರಡು ಲೋಪಗಳೆಂದು ಹೇಳಬಹುದು. ಒಂದನೇಯದು ಸರ್ವೋದಯ ಆಂದೋಲನದ ಸಂಘಟನೆಯ ಬಗ್ಗೆ ಚರ್ಚೆ, ಮಾಡಲು ಮತ್ತು ಕಾರ್ಯಕ್ರಮ ಹಾಕಿಕೊಳ್ಳಲು ಸಾಧ್ಯವಾಗದೇ ಇದ್ದುದು:- ಎರಡನೇಯದು ಪ್ರಚಲಿತ ಯಾವುದೇ ವಿಷಯದ ಬಗ್ಗೆ ಠರಾವನ್ನು ಕೈಗೊಳ್ಳಲು ಸಮಯದ ಅಭಾವದಿಂದ ಸಾಧ್ಯವಾಗದೆ ಹೋದುದು ಮುಂದಿನ ವರ್ಷ ತುಮಕೂರಿನಲ್ಲಿ ನಡೆಯುವ ಎರಡನೇ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಈ ಲೋಪಗಳು ಉಂಟಾಗದಂತೆ ನೋಡಿಕೊಳ್ಳಲಾಗುವುದೆಂದು ಆಶಿಸಲಾಗಿದೆ. ಒಟ್ಟಾರೆಯಾಗಿ ಸರ್ವೋದಯ ಸಮಾಜ ಸಮ್ಮೇಳನದ ಕಾರಣದಿಂದ ಕರ್ನಾಟಕದಲ್ಲಿ ಸರ್ವೋದಯ ಆಂದೋಲನ ಅಗತ್ಯವಿದೆಯೆಂಬ ಅನಿಸಿಕೆ ಕೆಲವರಲ್ಲಾದರೂ ಮೂಡಿದೆ ಎಂದು ಹೇಳಬಹುದಾಗಿದೆ.

ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಬರೆದು ಕಳುಹಿಸಿದ ಸರ್ವೋದಯ ವಿಚಾರ ಪ್ರೇಮಿಗಳ ಅಭಿಪ್ರಾಯವನ್ನು ಕೆಳಗೆ ಕಾಣಿಸಲಾಗಿದೆ.

ಈ ಮಿತ್ರರರಲ್ಲದೆ ಇನ್ನು ಹಲವಾರು ಸ್ನೇಹಿತರು ದೂರವಾಣಿಯ ಮೂಲಕ ತಮ್ಮ ಮೆಚ್ಚುಗೆಯ ಮಾತನ್ನು ತಿಳಿಸಿದ್ದಾರೆ. ಅಖಿಲಭಾರತ ಸರ್ವೋದಯ ಸಮಾಜ ಸಮ್ಮೇಳನವು ಬರುವ ವರ್ಷ ನವೆಂಬರ್ ತಿಂಗಳಲ್ಲಿ ಪಾಂಡಿಚೇರಿಯಲ್ಲಿ ನಡೆಯಲಿದೆ.

ಅಭಿಪ್ರಾಯಗಳು

ದಿನಾಂಕ ೯/೧೨/೨೦೧೬ ರಂದು ನಡೆದ ಎಲ್ಲ ವಿಚಾರ ಗೋಷ್ಠಿಗಳು ಚೆನ್ನಾಗಿದ್ದವು. ಇಂತಹ ಒಂದು ಅರ್ಥಪೂರ್ಣವಾದ ಸಮ್ಮೇಳನವನ್ನು ಆಯೋಜಿಸಿದ ತಮಗೆ ಹೃತ್ಪೂರ್ವಕ ಧನ್ಯವಾದಗಳು.

ನಾನು ನನ್ನ ವಿಚಾರಗಳನ್ನು ಮಂಡಿಸಲು ೪೫ ನಿಮಿಷಗಳ ಪೂರ್ಣ ಅವಕಾಶ ಸಿಗಲಿಲ್ಲ. ಎಷ್ಟೋ ವಿಷಯಗಳನ್ನು ಹೇಳಲು ಸಾಧ್ಯವಾಗಲೇ ಇಲ್ಲ. ನನ್ನ ಕೆಲಸಕ್ಕೆ ಪೂರ್ಣನ್ಯಾಯ ಒದಗಿಸಲು ಸಾಧ್ಯವಾಗಲಿಲ್ಲ. ತಾವು ಒದಗಿಸಿಕೊಟ್ಟ ಅವಕಾಶವನ್ನು ಸಾವಯುವ ಕೃಷಿಯು ಪ್ರಚಾರಕ್ಕೆ ಸಮರ್ಥವಾಗಿ ಬಳಸಿಕೊಳ್ಳಲಾಗಲಿಲ್ಲವೆಂಬ ಕೊರಗಿದೆ.

ತಮ್ಮ ಧರ್ಮಪತ್ನಿಯವರನ್ನು ವೇದಿಕೆಯಲ್ಲಿ ಒಂದು ಕ್ಷಣ ನೆನೆಪು ಮಾಡಿಕೊಳ್ಳಬೇಕೆಂದು ಬಯಸಿದ್ದೆ ಆದರೆ ಅದು ಮರೆತು ಹೋಯಿತು. ನಾವು ಎಷ್ಟುಬೇಗ ಸಮಾಜಕ್ಕಾಗಿ ದುಡಿದವರನ್ನು ಮರೆತು ಹೋಗುತ್ತೇವೆ. ಎಂಬುದು ಸಾಕ್ಷಿ ಸಮೇತ ರುಜುವಾತಾಯಿತು. ನಿಮ್ಮ ಎಲ್ಲ ಸಾಧನೆಯ ಹಿಂದೆ ಇದ್ದ 'ಶಕ್ತಿ' ಅವರು. ಅವರನ್ನು ನಾವು ಒಂದು ಗಳಿಗೆಯಾದರೂ ನೆನೆದುಕೊಳ್ಳಬೇಕಿತ್ತು.ಆದರೆ ಆ ಕೆಲಸ ಆಗಲಿಲ್ಲ. ಅದಕ್ಕಾಗಿ ಕ್ಷಮೆಯಾಚಿಸುತ್ತೇವೆ.

– ಬಿ. ಆರ್. ರಮೇಶ, ಹೊಳೆನರಸೀಪುರ

* * *

ಪ್ರಥಮ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ನಾನು ಪಾಲುಗೊಂಡಿದ್ದು ನನ್ನ ಜೀವನದ ಉತ್ತಮ ಕ್ಷಣಗಳಲ್ಲಿ ಒಂದು ಎಂಬುದಾಗಿ ತಿಳಿಸುತ್ತಾ, ಇದರಲ್ಲಿ ಭಾಗಿಯಾಗಲು ನನಗೆ ಅವಕಾಶ ನೀಡಿದ ತಮಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ತಿಳಿಸಲು ಬಯಸುತ್ತೇನೆ.

ಸಮ್ಮೇಳನದ ವಿವಿಧ ಗೋಷ್ಠಿಗಳಲ್ಲಿ ವಿಚಾರ ಮಂಡಿಸಿದವರು ಅತಿ ಉತ್ತಮ ಮಟ್ಟದ ಮತ್ತು ಪ್ರೌಢ ಚಿಂತನೆಯುನ್ನು ಸಭಿಕರೊಂದಿಗೆ ಹಂಚಿಕೊಂಡರು;ಅದು ನಿಜಕ್ಕೂ ಅರ್ಥಪೂರ್ಣವಾಗಿತ್ತು ಎಂದು ನನಗಾದರೂ ಅನಿಸಿತು.

ಸಮ್ಮೇಳನವು ಒಟ್ಟಾರೆ ಹಿರಿಯರಲ್ಲಿ ತುಂಬು ಆಸಕ್ತಿಯನ್ನು ಕೆರಳಿಸಿತು. ಕಿರಿಯರಿಗೆ ಮಾತನಾಡಲು, ಚರ್ಚೆಯಲ್ಲಿ ಪಾಲುಗೊಳ್ಳಲು ಪ್ರೋತ್ಸಾಹ ಇನ್ನೂ ಹೆಚ್ಚು ದೊರಕಿದ್ದರೆ, ಅವರಿಗೆ ಅವಕಾಶವನ್ನು ನೀಡುವುದು ಸಾಧ್ಯವಾಗಿದ್ದರೆ ಸಮ್ಮೇಳನಕ್ಕೆ ಹೆಚ್ಚಿನ ಅರ್ಥ ದೊರಕುತ್ತಿತ್ತು; ವಿಶೇಷವಾಗಿ ಎರಡನೇ ದಿನ 'ಸರ್ವೋದಯ ಸಂಘಟನೆ' ಕುರಿತು ಇದ್ದ ಗೋಷ್ಠಿಯ ಪ್ರಾರಂಭದಲ್ಲಿ ನೀವು ಆಡಿದ ಮಾತುಗಳಲ್ಲಿ ಹೆಚ್ಚಿನ ಕಾಳಜಿ ಇತ್ತು. ಈ ವಿಷಯಕ್ಕೆ ಅಗತ್ಯ ಮಹತ್ವ ನೀಡದೇ ಹೋದರೆ, ಸಮ್ಮೇಳನ ನಡೆಸಿದ್ದು ಅರ್ಥಪೂರ್ಣವಾಗುವುದಿಲ್ಲ ಎಂಬ ಮಾತನ್ನು ನೀವು ಅತ್ಯಂತ ಸ್ಪಷ್ಟವಾಗಿ ತಿಳಿಸಿದಿರಿ. ಆದರೂ, ಆ ಗೋಷ್ಠಿಯಲ್ಲಿ ಸಂಘಟನೆಯನ್ನು ಹೇಗೆ ಬಲಪಡಿಸಬೇಕು? ಇದರಲ್ಲಿ ವಿದ್ಯಾರ್ಥಿ- ಯುವಜನರು ಹೇಗೆ ಪಾಲುಗೊಳ್ಳಬೇಕು ಎಂಬ ಬಗ್ಗೆ ನಿಖರವಾದ ಮಾಹಿತಿ ನೀಡಲ್ಪಡಲಿಲ್ಲ; ಈ ಗೋಷ್ಠಿಯಲ್ಲಿ ಮಾತನಾಡುವುದಕ್ಕೆ ವಿದ್ಯಾರ್ಥಿ- ಯುವಜನರಿಗೆ ಕನಿಷ್ಠ ಒಂದು ಗಂಟೆ ಅವಕಾಶ ದೊರಬೇಕಿತ್ತು. ಆಗಲೇ ಅವರಿಗೆ ಮುಂದಿನ ದಿನಗಳಲ್ಲಿ ತಮ್ಮ ಜವಾಬ್ದಾರಿ ಏನು? ತಾವು ವಿಷಯಗಳ ಬಗ್ಗೆ ಸ್ಪಷ್ಟತೆ ದೊರಕಬಹುದಿತ್ತು. ಇದೊಂದು ಮುಖ್ಯ ಕೊರತೆಯಾಗಿ ಉಳಿಯಿತು.

ಸಮ್ಮೇಳನದಲ್ಲಿ ಪರಿಶ್ರಮವಹಿಸಿ, ಜವಾಬ್ದಾರಿಯಿಂದ, ಸಮಾಜಕ್ಕೆ ಮಾರ್ಗದರ್ಶನ ದೊರಕುವಂತೆ ನಡೆಸಿದ್ದಕ್ಕಾಗಿ ನಾನು ತಮ್ಮನ್ನು, ತಮ್ಮ ಜೊತೆ ಕೆಲಸ ಮಾಡಿದ ಎಲ್ಲರನ್ನೂ ಶಿರಬಾಗಿ, ಮನಃಪೂರ್ವಕವಾಗಿ ಕೃತಜ್ಞತೆ ಸಲ್ಲಿಸಲು ಬಯಸುತ್ತೇನೆ.

–ಮಂಗ್ಳೂರ ವಿಜಯ, ಬೆಂಗಳೂರು.

***

ಕರ್ನಾಟಕದ ಹೊಸ ತಲೆಮಾರುಗಳ ಹುಡುಗ–ಹುಡುಗಿಯರು. 'ಸರ್ವೋದಯ! ಹಾಗೆಂದರೇನು?' ಎಂದು ಕೇಳತೊಡಗಿರುವ ಹೊತ್ತಿನಲ್ಲಿ,

ರಾಜ್ಯದಲ್ಲಿ ಸರ್ವೋದಯ ಆಂದೋಲನವನ್ನು ಔಪಚಾರಿಕವಾಗಿಯಾದರೂ ತಮ್ಮ ಜನಪದ ಸೇವಾ ಟ್ರಸ್ಟ್‌ನ ಚಟುವಟಿಕೆಗಳ ಮೂಲಕ ಜೀವಂತವಾಗಿಟ್ಟುಕೊಂಡು ಬಂದಿರುವ ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರೂ ಆದ ಸುರೇಂದ್ರ ಕೌಲಗಿಯವರು ಮೊನ್ನೆ, ಡಿಸೆಂಬರ್ ೯ ಹಾಗು ೧೦ ರಂದು ತಮ್ಮೂರು ಮೇಲುಕೋಟೆಯಲ್ಲಿರುವ ಒಂದು ಭರ್ಜರಿ ಸರ್ವೋದಯ ಸಮ್ಮೇಳನವನ್ನು ನಡೆಸಿಯೇ ಬಿಟ್ಟರು. ಅದು 'ಪ್ರಥಮ ಕರ್ನಾಟಕ ರಾಜ್ಯ ಸರ್ವೋದಯ ಸಮಾಜ ಸಮ್ಮೇಳನ'ವೂ ಆಗಿದ್ದೊಂದು ವಿಶೇಷ. ನಿರೀಕ್ಷೆಗೂ ಮೀರಿ ಅಲ್ಲಿ ವಿಶಾಲ ಚಪ್ಪರದಡಿ ಜನ ಸೇರಿದ್ದರು. ಅದು ಕೌಲಗಿಯವರ ವಿಶಾಲ ಸಂಪರ್ಕ ಜಾಲದ ಪ್ರತೀಕ ಹೇಗೋ, ಸಾಮಾನ್ಯ ಜನತೆಯಲ್ಲಿನ ಗಾಂಧಿ ಬಗೆಗಿನ ಆಳದ ವಿಶ್ವಾಸದ ಪ್ರತೀಕವೂ ಆಗಿತ್ತೆಂದು ನನ್ನ ಅನಿಸಿಕೆ. ಏಕೆಂದರೆ ಅಲ್ಲಿ ಸರ್ವೋದಯ ನಾಯಕರು ಮತ್ತು ಕಾರ್ಯಕರ್ತರೆಂದು ಕಂಡವರು ಕೇವಲ ಬೆರಳೆಣಿಕೆಯ ಜನ. ಮಿಕ್ಕವರು ಮಂಡ್ಯ ಜಿಲ್ಲೆಯ ಹಿರಿಯ ತಲೆಮಾರಿನ ಒಂದಷ್ಟು ಜನದ ಜೊತೆಗಿದ್ದ ಅಪಾರ ಸಂಖ್ಯೆಯ ರಾಷ್ಟ್ರೀಯ ಸೇವಾ ಯೋಜನೆಯ ಅಧ್ಯಾಪಕ ಬಳಗ ಮತ್ತು ವಿದ್ಯಾರ್ಥಿ ಸಮೂಹ. ಅವರು ಯಾರೇ ಆಗಲಿ, ಇಷ್ಟೊಂದು ಜನ ಗಾಂಧಿ ಹೆಸರಿನಲ್ಲಿ ಬಂದು ಸೇರಿ ಎರಡು ದಿನ ವೇದಿಕೆಯ ಮೇಲೆ ನಡೆದ ಚರ್ಚೆಗಳನ್ನು ಆಲಿಸಿ ಹೋದದ್ದು ಇಂದಿನ ದಿನಮಾನಸಗಳಲ್ಲಿ ಸಾಮಾನ್ಯ ಘಟನೆಯಲ್ಲ. ಇದಕ್ಕಾಗಿ ಸುರೇಂದ್ರ ಕೌಲಗಿ ಮತ್ತು ಅವರ ತಂಡವನ್ನು ಅಭಿನಂದಿಸಬೇಕು.

ಮಿಕ್ಕಂತೆ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರಿಂದ ಉದ್ಘಾಟಿಸಲ್ಪಟ್ಟ ಈ ಸಮ್ಮೇಳನದಗೋಷ್ಠಿಗಳಲ್ಲಿ ವಿಶೇಷವಾದದ್ದೇನೂ ಇರಲಿಲ್ಲವೆಂದೇ ಹೇಳಬೇಕು . 'ಬದಲಾಗುತ್ತಿರುವ ಸಮಾಜಕ್ಕೆ ಸರ್ವೋದಯ ಸಿದ್ಧಾಂತ' ಎಂಬುದು ಸಮ್ಮೇಳನದ ವಿಷಯವೆಂದು ಗೊತ್ತುಮಾಡಲಾಗಿತ್ತಾದರೂ, ಎರಡು ಮೂರು ಗೋಷ್ಠಿಗಳ ಭಾಷಣಕಾರರ ಹೊರತಾಗಿ ಮಿಕ್ಕವರದ್ದು ಅದೇ ಹಳೆಯ ಸರ್ವೋದಯ ಘೋಷಣೆಗಳ ಚರ್ವಿತ ಚರ್ವಣ. ಎರಡನೇ ದಿನದ ಗೋಷ್ಠಿಯೊಂದರಲ್ಲಿ, ರಾಜ್ಯದಲ್ಲಿ ಸರ್ವೋದಯ ಆಂದೋಲವನ್ನು ಸಂಘಟಿಸುವ ಬಗೆಗಳ ಬಗ್ಗೆ ಸಭಿಕರಿಂದ ಹತ್ತು ನಿಮಿಷಗಳಲ್ಲಿ ತಾವು ತಾವೇ ಚರ್ಚಿಸಿ ಸಲಹೆ ನೀಡಬೇಕೆಂದು ಆಹ್ವಾನಿಸಿದ ರೀತಿ, ಸಂಘಟನಾಶೀಲತೆಯನ್ನು ಕುರಿತ ಈ ಸಮ್ಮೇಳನದ ಸಂಘಟಕರ

ಮುಗ್ಧತೆಯನ್ನು ಸೂಚಿಸುವಂತಿತ್ತು.ಅದೇನೇ ಇರಲಿ, ಈ ಸಮ್ಮೇಳನದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಿದ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿ ಸಮೂಹದ ಉತ್ಸಾಹ ಮತ್ತು ಸೇವಾ ಮನೋವೃತ್ತಿ ಹೊಸ ತಲೆಮಾರಿನ ಬಗ್ಗೆ ಒಂದಿಷ್ಟು ಆಶೆಯನ್ನು ಹುಟ್ಟಿಸುವಂತಿತ್ತು. ಈ ಸಮ್ಮೇಳನದ ಯಶಸ್ಸನ್ನು ನಾನು ಇಲ್ಲಿ ಕಂಡೆ ಎಂದು ಹೇಳಬೇಕು.

ಡಿ. ಎಸ್. ನಾಗಭೂಷಣ

***

ಹಾಸನದ ಸರ್ವೋದಯ ಮಿತ್ರರಾದ ಶ್ರೀ ಜಿ. ಹೋ. ನಾರಾಯಣಸ್ವಾಮಿ, ಅನುಗನಾಳು ಕೃಷ್ಣಮೂರ್ತಿ ಮತ್ತು ಎಚ್. ಎಮ್. ಶಿವಣ್ಣನವರು, ಮಂಜಪ್ಪ ಗೌಡರು ಸಮ್ಮೇಳದಲ್ಲಿಯ ಕೆಳಗೆ ಕಾಣಿಸಿದ ನ್ಯೂನತೆಗಳತ್ತ ಗಮನ ಸೆಳೆದಿದ್ದಾರೆ.

- ಕೇವಲ ವಿಷಯ ಮಂಡನೆಗಳಾದವೇ ಹೊರೆತು ಚರ್ಚೆಗೆ ಅವಕಾಶ ಸಿಗಲಿಲ್ಲ.
- ಗೋಷ್ಠಿಗಳನ್ನು ಸರಳಿಕೊಳಿಸಬೇಕು ಒತ್ತಡವಿರಬಾರದು.
- ವೇದಿಕೆಯಲ್ಲಿ ಗಾಂಭೀರ್ಯದ ಕೊರತೆ ಇತ್ತು.
- ಜ್ವಲಂತ ಸಮಸ್ಯೆಗಳು ಮತ್ತು ಕೆರೆಗಳ ಪುನರ್‌ಚ್ಛೇತನ ಮುಂತಾದ ವಿಷಯಗಳ ಬಗ್ಗೆ ಚರ್ಚೆ ಆಗಬೇಕಿತ್ತು.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್‌ನಲ್ಲಿ ಉತ್ಪಾದನೆಯಾಗುತ್ತಿರುವ ಖಾದಿ ಬಟ್ಟೆಗೆ ನೈಸರ್ಗಿಕ ಬಣ್ಣ ಹಾಕುವ ಕ್ರಿಯೆಯನ್ನು ಮಾಡಲಾಗುತ್ತದೆ. ಖಾದಿ ಬಟ್ಟೆಗೆ ಉಪಯೋಗಿಸಲಾಗುವ ಹತ್ತಿ ಮತ್ತು ದಾರ ನೈಸರ್ಗಿಕವಾಗಿರುವುದರಿಂದ ಅದರಿಂದ ತಯಾರಾಗುವ ಬಟ್ಟೆಗೂ ಕೂಡ ನೈಸರ್ಗಿಕ ಬಣ್ಣವನ್ನೇ ಉಪಯೋಗಿಸಿದರೆ ಖಾದಿಯ ಮೂಲ ವಿಚಾರಕ್ಕೆ ನ್ಯಾಯ ಒದಗಿಸುವಂತಾಗುತ್ತದೆ. ಆದ್ದರಿಂದ ಬಣ್ಣ ಹಾಕುವ ಕಾರ್ಯದಲ್ಲಿ ಸುಧಾರಣೆಯನ್ನು ಮಾಡುತ್ತಲೇ ಇರಬೇಕಾಗುತ್ತದೆ. ಆ ನಿಟ್ಟಿನ ಪ್ರಯತ್ನದ ಅಂಗವಾಗಿ ಟ್ರಸ್ಟಿನ ಕಾರ್ಯಕರ್ತರಾದ ಲೋಕೇಶ್ ಎಂಬುವವರನ್ನು ಹೈದರಬಾದಿನಲ್ಲಿರುವ ರಾಷ್ಟ್ರೀಯ ಗೃಹೋದ್ಯೋಗಗಳ ತರಬೇತಿ ಕೇಂದ್ರಕ್ಕೆ ಕಳುಹಿಸಿ ನೈಸರ್ಗಿಕವಾಗಿ ನೀಲಿ ಬಣ್ಣ ಹಾಕುವ ತರಬೇತಿಯನ್ನು ಹೊಂದಲು ಕಳುಹಿಸಲಾಗಿತ್ತು. ಅವರು ಒಂದು ತಿಂಗಳ ಪ್ರಶಿಕ್ಷಣ ಮುಗಿಸಿ ಹಿಂದಿರುಗಿದ್ದಾರೆ. ಇನ್ನು ಆ ನೀಲಿ ಬಣ್ಣದ ಖಾದಿ ಉತ್ಪಾದನೆಯೂ ಪ್ರಾರಂಭವಾಗುವುದು.

***

ಟ್ರಸ್ಟಿನ ದತ್ತು ಕೇಂದ್ರಕ್ಕೆ ಮಕ್ಕಳ ರಕ್ಷಣಾ ಇಲಾಖೆಯ ಉನ್ನತ ಸಮಿತಿಯ ಸದಸ್ಯರು ಭೇಟಿಕೊಟ್ಟರು. ಅವರೊಂದಿಗೆ ಮಕ್ಕಳ ಹಕ್ಕಿಗಾಗಿ ಹೋರಾಟಮಾಡುವ ಮೀನಾ ನಾಯಕ್ ಕೂಡ ಬಂದಿದ್ದರು. ಸದಸ್ಯರು ಕೇಂದ್ರದ ಬಗ್ಗೆ ತಮ್ಮ ಸಮಧಾನ ಸೂಚಿಸಿದರು.

***

ಆಸ್ಟ್ರೇಲಿಯಾ ದೇಶದಿಂದ ಮ್ಯಾಕ್ಲಾಆಯನ್ ಮತ್ತು ಮಾರ್ಟಿ ಎಂಬ ದಂಪತಿಗಳು ಟ್ರಸ್ಟಿಗೆ ಭೇಟಿಕೊಟ್ಟರು. ಹೊಸ ಜೀವನ ದಾರಿಗೂ ಭೇಟಿಕೊಟ್ಟರು ಮತ್ತು ಖಾದಿ ಬಟ್ಟೆಯನ್ನು ಖರೀದಿಸಿದರು.

***

ಖಾದಿ ಕ್ಷೇತ್ರದಲ್ಲಿ ನೂರಾರು ಹಿರಿಯರು ಬಟ್ಟೆಯ ವಿಷಯದಲ್ಲಿ ಸ್ವಾವಲಂಬನೆಗಾಗಿ ಪೆಟ್ಟಿಗೆ ಚರಕದಲ್ಲಿ ನೂಲು ತೆಗೆಯುತ್ತಾರೆ. ಪೆಟ್ಟಿಗೆ ಚರಕದ ಮೇಲೆ ನೂಲು ತೆಗೆಯುವ ವಿಷಯವಾಗಿ ಜನರಲ್ಲಿ ಆಸಕ್ತಿ ಮೂಡಿಸಲು

ಮಾಧವ್ ಸಹಸ್ರಬುದ್ಧೆ, ನಿವೃತ್ತ ಇಂಜಿನಿಯರ್, ಕೆಲಸ ಮಾಡುತ್ತಿದ್ದಾರೆ. ಟ್ರಸ್ಟಿನಲ್ಲಿರುವ ಪೆಟ್ಟಿಗೆಚರಕಗಳಿಗೆ ಚಾಲನೆ ಕೊಡಲು ಟ್ರಸ್ಟಿಗೆ ಭೇಟಿ ಕೊಟ್ಟರು.

***

ಮೈಸೂರಿನಲ್ಲಿರುವ ಇನ್‌ಫೋಸೀಸ್ ಕಂಪನಿಯಲ್ಲಿ ಕೆಲಸಮಾಡುವ ಇಂಜಿನಿಯರ್‌ಗಳ ಮಿತ್ರಮಂಡಳಿ ಭೇಟಿಕೊಟ್ಟಿತು ಮತ್ತು ತಾವು ಸಂಗ್ರಹಿಸಿದ ಹಣವನ್ನು ಧಾನವಾಗಿ ಕೊಟ್ಟಿತು.

***

ಕೈಮಗ್ಗ ಉದ್ಯಮಕ್ಕೆ ಹೊಸ ಯುವಕರು ಬರುವುದು ಅಪರೂಪವೆಂಬ ಪರಿಸ್ಥಿತಿಯಲ್ಲಿ ವಿಜಯಕುಮಾರ ಎಂಬ ೨೧ ವರ್ಷದ ಯುವಕನೊಬ್ಬ ಕೈಮಗ್ಗದ ನೇಕಾರನಾಗಿ ಕೆಲಸಮಾಡಲು ಮುಂದೆ ಬಂಧದ್ದು ಒಂದು ಒಳ್ಳೆಯ ಬೆಳವಣಿಗೆ ಎಂದು ಭಾವಿಸಬಹುದು. ಆ ಉತ್ಸಾಹಿ ಯುವಕ ಕೆಲದಿನಗಳ ಹಿಂದೆ ಮೋಟರ್ ಸೈಕಲ್ ಅಪಘಾತಕ್ಕೀಡಾಗಿ ಆಸ್ಪತ್ರೆಗೆ ಸೇರಿದ್ದಾನೆ. ಅವನ ಸ್ಥಿತಿ ಸಧ್ಯಕ್ಕೆ ಚಿಂತಾಜನಕವಾಗಿದೆ. ಅವನು ಬೇಗ ಗುಣಮುಖನಾಗಲೆಂದು ಜನಪದ ಸೇವಾ ಟ್ರಸ್ಟಿನ ಕಾರ್ಯಕರ್ತರೆಲ್ಲರೂ ದೇವರಲ್ಲಿ ಪ್ರಾರ್ಥಿಸುತ್ತಾರೆ.

ಮುಸ್ಸಂಜೆಯ ಬೆಳಕಿನಲ್ಲಿ.....೨

– ಸುರೇಂದ್ರ ಕೌಲಗಿ

ನಾನು ಎಂಟು ವರ್ಷದ ವಯಸ್ಸಿನವನ್ನಾಗಿದ್ದಾನಿಂದಲೇ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿದ್ದೆ. ಬಾಲಕನಾಗಿ ಎಷ್ಟು ಸಾಧ್ಯವೋ ಅಷ್ಟು ಚಳುವಳಿಯು ಕಾರ್ಯಕ್ರಮುಗಳಲ್ಲಿ ಭಾಗವಹಿಸುತ್ತಿದ್ದೆ. ಉದಾಹರಣೆಗೆ ಪ್ರಭಾತಫೇರಿಗಳಲ್ಲಿ ಭಾಗಿಯಾಗುವುದು ರಾಷ್ಟ್ರ ಸೇವಾದಳಕ್ಕೆ ಹೋಗುವುದು, ಪೋಲಿಸರ ಮೇಲೆ ಕಲ್ಲು ಎಸೆಯುವುದು ಇತ್ಯಾದಿ. ಆಗಾಗ್ಗೆ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ನಡೆಯುತ್ತಿದ್ದ ಲಾಠಿ ಚಾರ್ಜ್ ಮತ್ತು ಗುಂಡಿನ ಮಳೆ ಮುಂತಾದವುಗಳನ್ನು ನೋಡುವುದು, ಕ್ಷಮೆಯಾಚಿಸಿ ಜೈಲಿನಿಂದ ಬಿಡುಗಡೆಯಾಗಿ ಬಂದವರನ್ನು ಅವಮಾನಗೊಳಿಸುವುದಕ್ಕಾಗಿ ನಡೆಸುತ್ತಿದ್ದ ಮೆರವಣಿಗೆಯಲ್ಲಿ ಭಾಗಿಯಾಗುವುದು, ರಾಷ್ಟ್ರ ನಾಯಕರ ಭಾಷಣಗಳನ್ನು ಕೇಳಲು ದೂರ ನಡೆದುಹೋಗುವುದು, ಈ ಮುಂತಾದ ಚಿಕ್ಕ ಪುಟ್ಟ ಹೋರಾಟಗಳಲ್ಲಿ ಪಾಲ್ಗೊಳ್ಳುವುದರ ಜೊತೆಗೆ ಪತ್ರಿಕೆಗಳಲ್ಲಿ ಬರುವ ಮಹತ್ಮಾಗಾಂಧೀಜಿಯವರ ವಿವಿಧ ಭಂಗಿಗಳ ಚಿತ್ರಗಳನ್ನು ನೋಡಿ ಆ ಬಗ್ಗೆ ನನ್ನ ತಂದೆಯವರಿಂದ ವಿವರಣೆ ಕೇಳಿದ ನಂತರ ಗಾಂಧೀಜಿಯವರ ಬಗ್ಗೆ ಮನಸ್ಸಿನಲ್ಲಿ ಗೌರವ, ಭಕ್ತಿ, ಉಂಟಾದವು. ದೊಡ್ಡವನಾದಂತೆ ಗಾಂಧೀ ವಿಚಾರಗಳ ಪರಿಚಯ ತಕ್ಕ ಮಟ್ಟಿಗೆ ಆಗುತ್ತಾ ಬಂದಿತು. ಪಠ್ಯ ಪುಸ್ತಕಗಳಲ್ಲಿ ಇದ್ದ ಗಾಂಧೀ ವಿಚಾರ ಮತ್ತು ಗಾಂಧೀಜಿಯರ ಸಮಕಾಲೀನರ ವಿಚಾರದ ಬಗ್ಗೆಯೂ ಅಲ್ಪಸ್ವಲ್ಪ ಗೊತ್ತಾಗುತ್ತಾ ಬಂದಿತು. ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆದುದರಿಂದ ಹಾಗೂ ಬರೆಯುವ ಹವ್ಯಾಸವೂ ಅದೇಗೋ ಮೈಗೂಡಿದ್ದರಿಂದ ಗಾಂಧೀ ವಿಚಾರಗಳತ್ತ ಹೆಚ್ಚು ಗಮನ ಹೋಯಿತು. ಕಾಲೇಜಿನ ಬಹು ಅಲ್ಪ ಕಾಲೀನ. ಸಮಯದಲ್ಲಿಯೇ ಪ್ರೊ॥ಅಪರಂಜಿ ಎಂಬ ಅರ್ಥಶಾಸ್ತ್ರ ಪ್ರಾಧ್ಯಾಪಕರೊಂದಿಗೆ ಹಳ್ಳಿಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಸರ್ವೇಕ್ಷಣಕ್ಕೆ ಹೋಗುವ ಅವಕಾಶ ಬಂತು. ಬಾಗಲಕೋಟೆಯಲ್ಲಿದ್ದಾಗ ಡಾ॥ ನಾ. ಸು. ನಾರ್ಡಿಕರ್ ರವರ ಸೇವಾದಳ ಕಾರ್ಯಕರ್ತರಾಗಿದ್ದ ಹಳಪೇಟೆಯವರ ಸಂಪರ್ಕ ಬಂತು ಮತ್ತು ಆಗಿನ ಬಿಜಾಪುರ ಜಿಲ್ಲಾ ವ್ಯಾಯಾಮ ಪರಿಷತ್ತನ್ನು ಏರ್ಪಡಿಸುವ ಅವಕಾಶವೂ ಸಿಕ್ಕಿತು. ಈ ಎಲ್ಲ ಕಾರಣಗಳಿಂದಾಗಿ ಗಾಂಧಿ ವಿಚಾರದ ಪರಿಚಯ ಇನ್ನಷ್ಟು ಆಯಿತು. ಆದ್ದರಿಂದ ಆಗಿನ ಕಾಲದ ಜನಪ್ರಗತಿ ಎಂಬ ವಾರಪತ್ರಿಕೆ, ಫೋರಂ,

ಎಂಬ ಇಂಗ್ಲೀಷ್ ನಿಯತ ಕಾಲಿಕೆಗೂ ಮತ್ತು ಇಂಗ್ಲೀಷ್ ಹಾಗೂ ಕನ್ನಡ ದಿನಪತ್ರಿಕೆಗಳು ವಾಚಕರ ವಾಣಿಗೆ ಬರೆಯುವ ಅಭ್ಯಾಸವೂ ಬೆಳೆಯಿತು. ಮುಂದೆ ಕೆಲಸಕ್ಕಾಗಿ ಮುಂಬೈಗೆ ಹೋಗುವ ಪ್ರಸಂಗ ಬಂದಾದ ಮೇಲೆ ಅಲ್ಲಿ ಸ್ವಾತಂತ್ರ್ಯ ಹೋರಾಟಗಾರರೂ, ಸಮಾಜವಾದಿ ನಾಯಕರೂ ಮತ್ತು ಸರ್ವೋದಯ ಸಿದ್ಧಾಂತಕ್ಕೆ ಜೀವನದಾನಿಯೂ ಆಗಿದ್ದ ಜಯಪ್ರಕಾಶ ನಾರಾಯಣ್ ಅವರ ಸಂಪರ್ಕ ಬಂದಾದ ಮೇಲೆ ಗಾಂಧೀ ಮತ್ತು ವಿನೋಬಾ ರವರ ವಿಚಾರದ ಪ್ರಭಾವ ಇನ್ನೂ ಹೆಚ್ಚಾಯಿತು. ಜಯಪ್ರಕಾಶ್ ನಾರಾಯಣ್ ಮತ್ತು ಅವರ ಪತ್ನಿ ಪ್ರಭಾವತಿ ಅವರೊಂದಿಗೆ ಐದು ವರ್ಷಗಳ ಕಾಲದ ನಿಕಟ ಸಂಪರ್ಕದಿಂದಾಗಿ ಸಾರ್ವಜನಿಕ ಜೀವನದ ವಿವಿಧ ಆಯಾಮಗಳ ಪರಿಚಯವಾಯಿತು ಮುಂದೆ, ಮಂಡ್ಯ ಜಿಲ್ಲೆಯ ಮೇಲುಕೋಟೆಯನ್ನು ಕಾರ್ಯಕ್ಷೇತ್ರವನ್ನು ಮಾಡಿಕೊಂಡಾದ ಮೇಲೆ ಸರ್ವೋದಯ ವಿಚಾರವನ್ನು ಹಾಗೂ ಗಾಂಧೀ ಮತ್ತು ವಿನೋಭಾರವರ ಸಾರ್ವಜನಿಕ ಜೀವನದ ಅನುಭವದ ಸಾಹಿತ್ಯವನ್ನು ಓದಬೇಕಾದ ಅಗತ್ಯ ಉಂಟಾಯಿತು. ಅವರ ಅನುಭವದ ವಿಚಾರಗಳೊಂದಿಗೆ ನನ್ನ ಕಾರ್ಯಕ್ಷೇತ್ರದ ಅನುಭವಗಳು ಸರ್ವೋದಯ ವಿಚಾರವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ಮಾಡಿತು. ಹೀಗೆ ಸರ್ವೋದಯದ ವಿಚಾರದ ಯಾತ್ರೆ ಹತ್ತನೇ ವಯಸ್ಸಿನಿಂದ ಪ್ರಾರಂಭವಾಗಿ ಜೀವಮಾನದ ಮುಸ್ಸಂಜೆಯ ವಯಸ್ಸಿನವರೆಗೂ ಜೊತೆಗೆ ಬಂದ ಕಾರಣದಿಂದ ಈಗಲೂ ಜೀವನದಲ್ಲಿ ಹೊಸತನ ಇರುವಂತೆ ಮತ್ತು ಸಂಬಂಧಗಳಲ್ಲಿ ಹೊಸತನ ಬರುವಂತೆ ಮಾಡಲು ಸಾಧ್ಯವಾಗಿದೆ. ಆಗ ಹತ್ತನೇ ವಯಸ್ಸಿನಲ್ಲಿ ಉಂಟಾದ ಗಾಂಧೀಜಿಯವರ ಪ್ರಭಾವ ಈ ಮುಸ್ಸಂಜೆಯ ಬೆಳಕಿನಲ್ಲಿಯೂ ಜಾಗೃತವಾಗಿದೆ. ಕಳೆದ ೭೦ ವರ್ಷಗಳಿಂದ ಗಾಂಧೀ ವಿಚಾರದ ಕೆಲಸ ಮಾಡುತ್ತ ಬಂದ ಪರಿಣಾಮದ ಕಾರಣವಾಗಿ ಕಳೆದ ಡಿಸೆಂಬರ್ ೯ ಮತ್ತು ೧೦ ರಂದು ೫೫ ವರ್ಷಗಳಿಂದ ಕಾರ್ಯ ಕ್ಷೇತ್ರವಾದ ಮೇಲುಕೋಟೆಯಲ್ಲಿ

ಕರ್ನಾಟಕ ರಾಜ್ಯ ಪ್ರಥಮ ಸರ್ವೋದಯ ಸಮಾಜ ಸಮ್ಮೇಳನವನ್ನು ನಡೆಸಲು ಸಾಧ್ಯವಾಯಿತು. ಅದರಿಂದಾಗಿ ಮನಸ್ಸಿಗೆ ಸಂತೋಷವಾಯಿತು. ಸಮ್ಮೇಳನದ ವಿಚಾರ ಸಾಕಾರಗೊಳ್ಳುವುದಕ್ಕೆ ಸ್ನೇಹಿತರು ತೋರಿಸಿದ ಪ್ರೀತಿ, ವಿಶ್ವಾಸ ಮತ್ತು ಗೌರವಗಳು ಕಾರಣ. ಇತ್ತಿಚೆಗಂತು ನನಗೆ ಸ್ವತಂತ್ರವಾಗಿ ಓಡಾಡಲು ಸಾಧ್ಯವಿಲ್ಲದೆ ಇರುವಾಗ ಸಮ್ಮೇಳನ ಆಯೋಜಿಸುವಂಥ ಕೆಲಸವನ್ನು ಮಾಡಲು ಧೈರ್ಯ ಬಂದದ್ದು ನನ್ನ ಎಲ್ಲ ಸ್ನೇಹಿತರು ಗಾಂಧೀ ವಿಚಾರ ಮತ್ತು ಸರ್ವೋದಯ ಸಿದ್ಧಾಂತದಲ್ಲಿ ಇಟ್ಟಿರುವ ಅಭಿಮಾನ

ಮೂಲಕಾರಣವಾಗಿದೆ. ನನ್ನ ಪ್ರಯತ್ನಕ್ಕಿಂತ ವಿಚಾರದ ಬಲ ಹೆಚ್ಚು ಕೆಲಸ ಮಾಡಿತೆಂದು ಹೇಳಬಹುದು. ಆ ವಿಚಾರದ ಬಲವೇ ಸಮ್ಮೇಳನದ ಎರಡೂ ದಿನ ವೇದಿಕೆಯ ಮೇಲೆ ಆರು-ಏಳು ಗಂಟೆಗಳ ಕಾಲ ಒಂದೆ ಸ್ಥಳದಲ್ಲಿ ಕುಳಿತುಕೊಳ್ಳುವ ಶಕ್ತಿಯನ್ನು ಕೊಟ್ಟಿತು. ವಿಚಾಥದ ಬಲ ಹೊಂದಿದ್ದು ಆರೋಗ್ಯದ ಸ್ವಲ್ಪ ಬಲವಿದ್ದರೆ ವಯಸ್ಸಿಗೆ ಮೀರಿದ ಸಾಧನೆ ಮಾಡಲು ಸಾಧ್ಯವಿದೆ ಎಂದು ನನಗೆ ಅನಿಸುತ್ತಿರುವಾಗಲೇ ಸ್ವಾತಂತ್ರ್ಯ ಹೋರಾಟಗಾರರೂ ಮತ್ತು ಸರ್ವೋದಯ ನಾಯಕರೂ ಆದ ಹೆಚ್. ಎಸ್. ದೊರೆಸ್ವಾಮಿಯವರು ತಮ್ಮ ೯೦ ನೇ ವಯಸ್ಸಿನಲ್ಲಿ ಸಮ್ಮೇಳನ ಉದ್ಘಾಟನೆ ಮಾಡಿ ಕೆಲವು ಸ್ಪಷ್ಟ ನುಡಿಗಳನ್ನು ನುಡಿದದ್ದು ಪ್ರೇರಣೆ ಕೊಡುವಂತಿತ್ತು. ಪ್ರತಿವರ್ಷ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಸರ್ವೋದಯ ಸಮಾಜ ಸಮ್ಮೇಳನ ಆಗಬೇಕು ಮತ್ತು ತನ್ಮೂಲಕ ರಾಜ್ಯದಲ್ಲಿ ಸರ್ವೋದಯ ಆಂದೋಲನಕ್ಕೆ ಬಲಬರಬೇಕೆಂಬ ಇಚ್ಛೆ ತಕ್ಕ ಮಟ್ಟಿಗೆ ನೆರವೇರುವ ಸೂಚನೆ ಕಂಡು ಬಂದಿರುವುದು ಕೂಡ ನನಗೆ ಸಂತೋಷವನ್ನುಂಟು ಮಾಡಿದೆ. ಎರಡನೇ ಸರ್ವೋದಯ ಸಮಾಜ ಸಮ್ಮೇಳನವನ್ನು ತುಮಕೂರು ಜಿಲ್ಲೆಯಲ್ಲಿ ಮಾಡಲು ಅಲ್ಲಿಯ ಸರ್ವೋದಯ ಮಿತ್ರರು ಮುಂದೆ ಬಂದಿದ್ದಾರೆ.

ಈ ಮಾತನ್ನು ಕುರಿತು ಯೋಚಿಸುತ್ತಿರುವಾಗ ಸಮಾಜದ ಋಣದ ಮಾತು ಜ್ಞಾಪಕ ಬಂತು. ಆಗ ಕವಿ ಜಿ. ಎಸ್. ಶಿವರುದ್ರಪ್ಪನವರ ಕವಿತೆಯ ಈ ಸಾಲನ್ನು ಗುನಗುನಿಸಿದೆ "ಎನಿತು ಜನ್ಮದಲ್ಲಿ ಎನಿತು ಜೀವರಿಗೆ ಎನಿತು ನಾವು ಋಣಿಯೋ ತಿಳಿದು ನೋಡಿದರೆ ಬಾಳು ಎಂಬುದಿದು ಋಣದ ರತ್ನ ಗಣಿಯೊ".

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಜೆ ಹೊ ನಾರಾಯಣಸ್ವಾಮಿ	– ಹಾಸನ
ಶ್ರೀ ಕೆ ವಿ ಶಂಕರಪ್ಪ	– ಕೊಲಾರ
ಶ್ರೀ ತಾ ನಂ ಕುಮಾರಸ್ವಾಮಿ	– ಆನೇಕಲ್
ಶ್ರೀ ಆರ್ ಆರ್ ಮಂಗಳವೆಡೆ	– ಮೈಸೂರು
ಶ್ರೀಮತಿ ಜಯಮ್ಮ ಕಲ್ಲಪ್ಪ	– ಬೆಂಗಳೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಎಮ್ ಬಸವಯ್ಯ	– ತುಮಕೂರು
ಶ್ರೀ ಸಂಜು ಶೆಟ್ಯಾಳಕರ	– ಕಾರವಾರ
ಶ್ರೀ ಲಿಂಗಣ್ಣ ಬಂಧುಕಾರ	– ಮಂಡ್ಯ
ಶ್ರೀ ಅನುಗಾಳು ಕೃಷ್ಣಮೂರ್ತಿ	– ಹಾಸನ
ಶ್ರೀ ಜಿ ಸಿ ಬಸವಲಿಂಗಪ್ಪ	– ದಾವಣಗೆರೆ
ಶ್ರೀ ಕೆ ಕೃಷ್ಣಮೂರ್ತಿ	– ಸುಳ್ಯ, ದಕ್ಷಿಣ ಕನ್ನಡ
ಶ್ರೀ ಟಿ.ವಿ.ಜಿ.ಚಂದ್ರು	– ಬೆಂಗಳೂರು
ಶ್ರೀ ಡಾ.ಸಿ.ಶಂಕರಯ್ಯ	– ಮಂಡ್ಯ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ. ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ.....

Mr Nagaraju M
#6, Medicare complex,
karangalapadi
Mangalore
575003

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237